ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್-2016
ಬೆಲೆ ರೂ. 1




## ಸಂಘದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

## ಸಾಧಕಿಯರಿಗೆ ಸನ್ಮಾನ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 7
ಏಪ್ರಿಲ್ 2016, ಬೆಲೆ ರೂ. 1

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷ
ವಸಂತ ಶೆಟ್ಟಿ ಬೆಳ್ಳಾರೆ: 9958697823

ಉಪಾಧ್ಯಕ್ಷರು
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

ಪ್ರಧಾನ ಕಾರ್ಯದರ್ಶಿ
ಸಿ.ಎಂ.ನಾಗರಾಜ: 9811325440

ಕೋಶಾಧಿಕಾರಿ
ಕೆ.ಎಸ್.ಜಿ. ಶೆಟ್ಟಿ 9810232113

ಜಂಟಿ ಕಾರ್ಯದರ್ಶಿಗಳು
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ಎಸ್. ಪರಮೇಶ್ 9015332380
ತ್ಯಾಗೇಶ್ ಮೂರ್ತಿ 9868393961

ವಿಶೇಷ ಆಹ್ವಾನಿತರು
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

ಕಾವಲು ಸಮಿತಿ
ಬಸವರಾಜ್ ಎಸ್. ಕಲ್ಲೂರು
ಎನ್.ಎ. ಮಾಧವ
ಡಾ. ಅಹಲ್ಯಾ ಚಿಂತಾಮಣಿ

## ನೇರ ಮಾತು

"ಮತ್ತೆ ಬಂದಿದೆ ಮುದ ತರುವ ಯುಗಾದಿ
ಚೈತ್ರದ ಕುಸುಮ ಅರಳಲು
ಮಾಮರಗಳು ಚಿಗುರಲು
ಕೋಗಿಲೆಗಳು ಉಲಿಯಲು
ತನು ಮನಗಳಿಗೆ ನವಚೇತನ ನೀಡಲು
ಮನ ಮನೆಗಳಿಗೆ ಹರುಷ ತುಂಬಲು
ಮರಳಿ ಬಂದಿದೆ ಯುಗಾದಿ
ಕನ್ನಡಿಗರಿಗೆ ಶುಭ ಕೋರಲು
ಮತ್ತೆ ಬಂದಿದೆ ಯುಗಾದಿ"

ಸಮಸ್ತ ಕನ್ನಡಿಗರಿಗೆ 'ದುರ್ಮುಖಿ ನಾಮ ಸಂವತ್ಸರ'ದ ಶುಭಾಶಯಗಳು.

ಪ್ರತಿ ವರ್ಷದಂತೆ ಯುಗಾದಿ ಹೊಸ ವರುಷದ ಹುರುಪನ್ನು ತಂದಿದೆ. ದೆಹಲಿ, ಕರ್ನಾಟಕ ಮತ್ತು ದೇಶದಾದ್ಯಂತ ಹೊಸ ಗಾಳಿ ಬೀಸಲಾರಂಭಿಸಿದೆ. ಮಾವಿನ ಚಿಗುರು, ಗೇರು, ತೆಂಗುಗಳ ಫಲ ಪುಷ್ಪಗಳು ಎಲ್ಲೆಲ್ಲೂ ಮೈಗೂಡಿ ಸಂತಸದ ಸಂಭ್ರಮದ ಸಂಗೀತ ಹಾಡುತ್ತಿವೆ. ಶಾಲಾ ಕಾಲೇಜುಗಳ ಪರೀಕ್ಷೆ ಮುಗಿಯುತ್ತಾ ಬಂದಿದ್ದು, ಮಕ್ಕಳಿಗೆ ರಜೆಯ ಸಂಭ್ರಮ. ಪುಟಾಣಿ ಮಕ್ಕಳು ಅಮ್ಮ ಅಪ್ಪರೊಡಗೂಡಿ, ಅಜ್ಜಿ-ಅಜ್ಜನ ಮನೆಗೆ ಹೋಗಿ, ಉಂಡೆ, ಚಕ್ಕುಲಿ, ಕೋಡುಬಳೆ, ಒಬ್ಬಟ್ಟು, ಪಾಯಸ ಹೀಗೆ ರುಚಿರುಚಿಯಾದ ತಿಂಡಿ ತಿನಿಸುಗಳನ್ನು ತಿನ್ನುವ ತಯಾರಿಯಲ್ಲಿದ್ದರೆ, ನವಯುವಕರು, ಹೊಸದಂಪತಿಗಳು, ದೇಶ ವಿದೇಶದ ಪರ್ಯಟನೆಗೆ ಸಿದ್ಧರಾಗುತ್ತಿದ್ದಾರೆ. ಬಸ್ಸು, ರೈಲು, ವಿಮಾನಗಳಲ್ಲಿ ಬಾರಿ ಜನಸಂದಣಿ, ಪ್ರೇಕ್ಷಣೀಯ ಸ್ಥಳಗಳಲ್ಲೆಲ್ಲಾ ಜನಸಮೂಹ, ಸಂಭ್ರಮದಿಂದ ಕೂಡಿ ತಮ್ಮ ಆನಂದದ ಕ್ಷಣಗಳನ್ನು ಕಳೆಯುವ ಕಾಲ. ಹೀಗೆ ವಸಂತ-ಗ್ರೀಷ್ಮ ಈ ಕಾಲ ಎಲ್ಲೆಲ್ಲೂ ಲವಲವಿಕೆಯಿಂದ ಕೂಡಿರುತ್ತದೆ. ಕರ್ನಾಟಕದ ಎಲ್ಲ ಸುಪ್ರಸಿದ್ಧ ಪ್ರವಾಸಿ ಸ್ಥಳಗಳು, ದೇಗುಲಗಳು, ಗುಡ್ಡ, ಬೆಟ್ಟ, ನದಿ, ಸಮುದ್ರ ಎಲ್ಲರನ್ನು ತನ್ನೆಡೆಗೆ ಕರೆಯುತ್ತಿದೆ.

ಮಾನವೀಯ ಮೌಲ್ಯಗಳು ಪರಸ್ಪರ ಸಂಬಂಧಗಳು ಅರ್ಥಹೀನವಾಗುತ್ತಿರುವ ಈ ತಾಂತ್ರಿಕ ಮತ್ತು ಯಾಂತ್ರಿಕ ಯುಗದಲ್ಲಿ ಇಂತಹ ರಜಾ ದಿನಗಳು ಮನುಷ್ಯ ಜೀವನಕ್ಕೆ ಸಂಜೀವಿನಿ ಇದ್ದಂತೆ. ಊರ ಜಾತ್ರೆ, ಗುಡಿ ಗೋಪುರಗಳಲ್ಲಿ ಉತ್ಸವ, ನಾಗಮಂಡಲ, ಕೋಲ, ಭಜನೆ, ಹರಿಕಥೆ, ಯಕ್ಷಗಾನ, ಕೋಲಾಟ, ಡೊಳ್ಳುಕುಣಿತ, ದೊಡ್ಡಾಟ, ಬಯಲಾಟ, ತಮಟೆ, ಓಲಗ, ವಾದ್ಯ, ಚೆಂಡೆ, ಮದ್ದಳೆ, ಕುಣಿತ, ನೃತ್ಯ, ಹಾಡು, ಸಂಗೀತ ಹೀಗೆ ಕಲೆಯ ಎಲ್ಲಾ ವಿಧಗಳ ವಿಶ್ವದರ್ಶನ, ಹಾಡಿ ಕುಣಿಯುವ ಸಂಭ್ರಮ, ಸುಖ ಸಂತೋಷದ ನೆಮ್ಮದಿಯ, ಸ್ನೇಹ ಪ್ರೀತಿ ವಾತ್ಸಲ್ಯದ ಜೀವನ ಎಲ್ಲೆಲ್ಲೂ ಹರಡುವಂತಾಗಲಿ. ಮುಂಬರುವ ದಿನಗಳಲ್ಲಿ ಒಳ್ಳೆಯ ಮಳೆ ಬೆಳೆಯಾಗಿ ಭಾರತ ಮಾತೆ ಹಸಿರುತೊಟ್ಟು ಸಮೃದ್ಧಳಾಗಿ ಸಮಸ್ತ ದೇಶವಾಸಿಗಳಿಗೆ ಸುಖವಾಗಲಿ, ಶುಭವಾಗಲಿ, ಮಂಗಳವಾಗಲಿ ಎಂದು ಹಾರೈಸೋಣ.

ದೆಹಲಿ ಕರ್ನಾಟಕ ಸಂಘವು ಅರ್ಥಪೂರ್ಣವಾದ ಕನ್ನಡ ಸಂಸ್ಕೃತಿ, ಸಾಹಿತ್ಯ, ಕಲೆಗಳಿಗೆ ಸಂಬಂಧಿಸಿದ ವಿವಿಧ ಯಶಸ್ವೀ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಹೆಚ್ಚು ಮಹತ್ವಪೂರ್ಣವಾದ ಮತ್ತು ಅದ್ಭುತವಾದ ಕನ್ನಡ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಾಡ ಮತ್ತು ಹೊರನಾಡ ಕನ್ನಡಿಗರನ್ನೊಡಗೂಡಿ ಕನ್ನಡಾಂಬೆಯ ಸೇವೆಯನ್ನು ಬಹಳ ಮುತುವರ್ಜಿಯಿಂದ ಮುಂದುವರಿಸಿಕೊಂಡು ಕನ್ನಡದ ಬಾವುಟವನ್ನು ದೇಶದ ರಾಜಧಾನಿಯಲ್ಲಿ ಸದಾ ಹಾರಾಡಿಸುತ್ತ ಸಮಸ್ತ ಕನ್ನಡ ಬಾಂಧವರಿಗೆ ಸತ್ಕೀರ್ತಿ ತರುವಂತೆ ಕಂಕಣಬದ್ಧರಾಗಿ ದುಡಿಯಲು ಈ ಸಂದರ್ಭದಲ್ಲಿ ನಮ್ಮನ್ನು ನಾವು ಮತ್ತೊಮ್ಮೆ ಸಮರ್ಪಿಸಿಕೊಳ್ಳುತ್ತೇವೆ. ಅ

*ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು*

## ಅಭಿಮತ ರಸಪ್ರಶ್ನೆ

1. ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಮುಖ್ಯ ಅತಿಥಿಗಳು ಯಾರು?
2. ಸಂಘದಲ್ಲಿ ಏರ್ಪಡಿಸಿದ್ದ ಆಹಾರ ಮೇಳನ್ನು ಉದ್ಘಾಟಿಸಿದವರು ಯಾರು?
3. ಆಹಾರ ಮೇಳದಲ್ಲಿ ತೆಂಕೊಳಲ್ ತಿಂಡಿ ಮಾಡಿಕೊಂಡು ಬಂದವರು ಯಾರು?
4. ಸಂಘದಲ್ಲಿ ಮಾರ್ಚ್ 13ರಂದು ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಈರ್ವರು ಅತಿಥಿಗಳನ್ನು ಹೆಸರಿಸಿ?
5. ಸಂಘ ಪಾಕಿಸ್ತಾನದ ಜೈಲಿನಲ್ಲಿರುವ ಕರ್ನಾಟಕದ ಯಾರ ಬಿಡುಗಡೆಗಾಗಿ ಪ್ರಯತ್ನಿಸುತ್ತಿದೆ?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.04.2016ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಮಾರ್ಚ್ 2016ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ ಸರಿಯಾದ ಉತ್ತರ 1. ಪ್ರೊ. ಎಚ್.ಎಸ್. ಶಿವಪ್ರಕಾಶ್ 2. ಸತ್ಯಹರಿಶ್ಚಂದ್ರ ಮತ್ತು ಮಲಮಗಳು, 3. ಶ್ರೀ ಬಿ.ಎಲ್. ಸುರೇಶ್, 4. ಜೆ.ಎನ್.ಯು.ವಿನ ಹಳೇ ಕ್ಯಾಂಪಸ್, 5. ಮಾರ್ಚ್ 8 ಸರಿಯಾದ ಉತ್ತರ ಕಳುಹಿಸಿದವರು.

ಶ್ರೀಮತಿ ಪ್ರೇಮಲತಾ, ಶ್ರೀಮತಿ ನಾಗವೇಣಿ ಬಸವರಾಜು, ಶ್ರೀಮತಿ ಶಾರದಾ ಮಲ್ಲನಗೌಡ ಎಸ್ ಶ್ರೀ ಜೀವನ್ ದಿವಾಕರ್, ಶ್ರೀಮತಿ ಸೌಮ್ಯ ಕೊಟ್ರೇಶ್
ಶ್ರೀ ರಾಮಮೂರ್ತಿ ಕೆ.ಆರ್., ಶ್ರೀ ಶಿವಕುಮಾರ್
ಶ್ರೀ ಬಸವರಾಜು ಸಿ., ಶ್ರೀ ಮಹೇಂದ್ರ ಎಚ್., ಬೆಂಗಳೂರು

## ಮುನ್ನೋಟ

ಪ್ರಿಯ ಸದಸ್ಯರುಗಳೇ,

ಸಂಘದಲ್ಲಿ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದ್ದೇವೆ. ಮೊಟ್ಟ ಮೊದಲ ಬಾರಿಗೆ ದೆಹಲಿಯಿಂದ ಹೊರಗಡೆಗೆ ಪಿಕ್‌ನಿಕ್‌ನ್ನು ಯಶಸ್ವಿಯಾಗಿ ಆಯೋಜಿಸಿದ ನಂತರ ಕರ್ನಾಟಕ ಸಂಘದ ಇತಿಹಾಸದಲ್ಲೇ ಮೊಟ್ಟ ಮೊದಲಿಗೆ ಆಯೋಜಿಸಿದ ಆಹಾರ ಮೇಳದಲ್ಲಿ ಸಾವಿರಾರು ಮಂದಿ ಪಾಲ್ಗೊಂಡು ವಿಧವಿಧ ರೀತಿಯ ತಿಂಡಿ, ಪದಾರ್ಥಗಳನ್ನು ಸವಿಯುವುದರ ಮೂಲಕ ತಮ್ಮೆಲ್ಲರ ಮಚ್ಚುಗೆಯಿಂದ ಯಶಸ್ವಿಯಾಗಿದೆ. ನಿಮ್ಮ ಈ ಬಾರಿ ಪ್ರೋತ್ಸಾಹದಿಂದಾಗಿ ಆಹಾರ ಮೇಳ ನಿಗದಿಪಡಿಸಿದ ಸಮಯಕ್ಕಿಂತ 2 ಗಂಟೆ ಮೊದಲೇ ಮುಕ್ತಾಯವಾಗಿದ್ದುದು ಕೊನೆಯಲ್ಲಿ ಬಂದ ಅನೇಕರಿಗೆ ನಿರಾಶೆಯಾಗಿದೆ. ಮುಂಬರುವ ದಿನಗಳಲ್ಲಿ ಇದಕ್ಕೂ ದೊಡ್ಡ ಮಟ್ಟದಲ್ಲಿ ಆಯೋಜಿಸುತ್ತೇವೆ. ಮಹಿಳಾ ದಿನಾಚರಣೆ ಹಾಗೂ ಬೆಂಗಳೂರಿನ ರಂಗಸೌರಭ ಪ್ರಸ್ತುತಪಡಿಸಿದ ವರಕವಿ ಡಾ. ದ.ರಾ.ಬೇಂದ್ರೆ, ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಸಾಹಿತ್ಯ, ಕವಿತೆ ಮತ್ತು ಜೀವನವನ್ನು ಆಧರಿಸಿದ 'ಗಂಗಾವತರಣ' ಮತ್ತು 'ಮೈಸೂರು ಮಲ್ಲಿಗೆ' ನಾಟಕಗಳು ದೆಹಲಿ ಕನ್ನಡಿಗರ ಮನಮುಟ್ಟುವಂತಹ ಕಾರ್ಯಕ್ರಮಗಳಾಗಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಏಪ್ರಿಲ್ 30 ಮತ್ತು ಮೇ 1ರಂದು ಹೊರನಾಡ ಸಾಂಸ್ಕೃತಿಕ ಉತ್ಸವ ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯಲಿದೆ ಮತ್ತು ನಮ್ಮ ಪಕ್ಕದಲ್ಲಿರುವ ಗುರ್‌ಗಾಂವ್ ಕನ್ನಡ ಸಂಘದಲ್ಲಿ ಏಪ್ರಿಲ್ 24ರಂದು ನಡೆಯಲಿದೆ. ಸುಮಾರು 100 ಕಲಾವಿದರು ಭಾಗವಹಿಸುವ ಈ ಹೊರನಾಡ ಉತ್ಸವಕ್ಕೆ ತಾವೆಲ್ಲರೂ ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

### ದೆಹಲಿ ಕರ್ನಾಟಕ ಸಂಘದಲ್ಲಿ
## ತಿಂಗಳ ಕಾರ್ಯಕ್ರಮ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಕರ್ನಾಟಕ ಸರ್ಕಾರ,
ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ

**ಹೊರನಾಡ ಸಾಂಸ್ಕೃತಿಕ ಉತ್ಸವ**

30 ಏಪ್ರಿಲ್ 2016
1 ಮೇ 2016

**ಶನಿವಾರ ಮತ್ತು ಭಾನುವಾರ, ಬೆಳಿಗ್ಗೆ 10.00ರಿಂದ**

ಸುಗಮ ಸಂಗೀತ, ಭರತನಾಟ್ಯ, ತತ್ವಪದಗಳು, ಜಾನಪದ ಸಂಗೀತ, ಲಂಬಾಣಿ ನೃತ್ಯ, ಹಾಸ್ಯ ಸಂಗೀತ, ಜಾನಪದ ಸಂಗೀತ, ನೃತ್ಯ ರೂಪಕ, ಸಮೂಹ ನೃತ್ಯ ಮತ್ತು ಚೌಡಕಿ ಪದಗಳು ಕರ್ನಾಟಕ ಸುಪ್ರಸಿದ್ಧ ಕಲಾವಿದರನ್ನೊಳಗೊಂಡ ತಂಡಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿವೆ.

24 ಏಪ್ರಿಲ್ 2016 **ಭಾನುವಾರ, ಬೆಳಿಗ್ಗೆ 10.00ರಿಂದ**

**ಹೊರನಾಡ ಸಾಂಸ್ಕೃತಿಕ ಉತ್ಸವ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಸರ್ಕಾರ,
ಗುರುಗಾಂವ್ ಕನ್ನಡ ಸಂಘದ
ಸಹಯೋಗದೊಂದಿಗೆ
ಸ್ಥಳ : ಗುರುಗಾಂವ್, ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ–9911156695

## ಏಪ್ರಿಲ್ 11 ರಿಂದ ಮೇ 7, 2016

**ರಂಗ ತರಬೇತಿ ಶಿಬಿರ**

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು ಪ್ರಾಯೋಜಿಸಿರುವ ಸ್ಥಳೀಯ ಕಲಾವಿದರಿಗೆ ರಂಗ ತರಬೇತಿ ಶಿಬಿರ

## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳು

17 ಏಪ್ರಿಲ್ 2016 **ಭಾನುವಾರ, ಬೆಳಿಗ್ಗೆ 10.00 ರಿಂದ**

ನಾಡಪ್ರಭು ಕೆಂಪೇಗೌಡ ಫೌಂಡೇಷನ್(ರಿ)
ಆಯೋಜಿಸುವ
ರಾಷ್ಟ್ರೀಯ ಕರುನಾಡ ಸಾಂಸ್ಕೃತಿಕ ಸಂಭ್ರಮ

### ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಏಪ್ರಿಲ್, 2016ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಏಪ್ರಿಲ್ 2016ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 24 ಏಪ್ರಿಲ್, 2016ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 24 ಏಪ್ರಿಲ್, 2016ರಂದು ಸಾಯಂಕಾಲ 4 ಗಂಟೆಯಿಂದ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 011–26104818

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 26 ಸಂಚಿಕೆ 7
ಏಪ್ರಿಲ್ 2016

**ಅಭಿಮತ ಪ್ರಧಾನ ಸಂಪಾದಕರು**

ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**

ಸಖಾರಾಮ ಉಪ್ಪೂರು
ಚಂದ್ರಶೇಖರ್ ಎನ್.ಪಿ.
ಎಸ್. ಕುಮಾರ್



## ಸಂಪಾದಕೀಯ

# ಬರಗಾಲದ ಬವಣೆ

ವಿಸ್ತಾರವಾದ ಭೂಮಿಯ ಎಪ್ಪತ್ತೊಂದು ಭಾಗಕ್ಕಿಂತಲೂ ಹೆಚ್ಚು ಪ್ರದೇಶ ನೀರಿನಿಂದ ಆವರಿಸಿದೆ ಮತ್ತು ಆ ನೀರಿನ ತೊಂಭತ್ತಾರು ಭಾಗ ಸಮುದ್ರವಾಗಿದೆ. ಸಮುದ್ರ ಬಿಟ್ಟು ಉಳಿದ ಭೂಮಿಯಲ್ಲಿ ಜೀವಿಸುವ ಪ್ರಾಣಿಗಳಿಗೆ ಮತ್ತು ಸಸ್ಯ ಸಂಪತ್ತಿಗೆ ಜೀವಿಸಲು ಮುಖ್ಯವಾಗಿ ಶುದ್ಧವಾದ ಸಿಹಿನೀರಿನ ಅವಶ್ಯಕತೆ ಇದೆ. ಶುದ್ಧ ನೀರನ್ನು ಅರಸುತ್ತಾ ನದೀದಂಡೆಯಲ್ಲಿ ತನ್ನ ನಾಗರೀಕತೆಯನ್ನು ಮಾನವ ಸಂಕುಲ ಬೆಳೆಸಿದಂತೆ ಪ್ರಾಣಿ ಹಾಗು ಸಸ್ಯ ಸಂಕುಲಗಳು ಕೂಡಾ ಇಂತಹ ನದಿ ಪ್ರದೇಶಗಳಲ್ಲಿ ವಿಸ್ತಾರಗೊಂಡವು. ಜತೆಗೆ ಸಕಾಲಗಳಲ್ಲಿ ಮಳೆ ಬಂದು ನದಿಗಳು ತುಂಬಿ ಹರಿದುದಲ್ಲದೇ ಭೂಮಿಯ ಅಂತರ್ಜಲ ವ್ಯವಸ್ಥೆಯೂ ಸ್ಥಿರವಾಗಿದ್ದವು. ಕಾಲಕ್ರಮೇಣ ಮಾನವನ ಬದುಕು ಹೆಚ್ಚು ನಗರೀಕರಣ, ಔದ್ಯೋಗೀಕರಣ ಮತ್ತು ಯಾಂತ್ರೀಕೃತಗೊಂಡಂತೆ ಬದುಕುವ ಪರಿಸರದ ಮೇಲೆ ವಿಪರೀತ ಪರಿಣಾಮಗಳು ಬೀಳತೊಡಗಿದವು. ಮಾನವನ ಬಳಕೆಗಳಿಂದ ತ್ಯಾಜ್ಯಗಳು ಹೆಚ್ಚಾಗ ತೊಡಗಿದವು. ಇಂದು ಭೂಮಿ ಮತ್ತು ವಾತಾವರಣವು ಕಲುಷಿತಗೊಂಡು ಹವಾಮಾನವು ಮಾರ್ಪಾಡಾಗುವ ಲಕ್ಷಣಗಳು ಕಂಡು ಬರುತ್ತಿವೆ. ನೈಜವಾಗಿ ಬೀಳುತ್ತಿರುವ ಮಳೆ, ಬಿಸಿಲು, ಚಳಿಗಳು ವಾತಾವರಣದ ವೈಕೋಪ್ಯಗಳಿಂದಾಗಿ ಏರುಪೇರಾಗಿವೆ. ಪ್ರಕೃತಿ ಮತ್ತು ಜೀವಸಂಕುಲಗಳ ನಡುವೆ ಸಮರ ಆರಂಭವಾಗಿದೆ.

ನಾಡಿನಲ್ಲಿ ವಸಂತು ಋತುವಿನ ಆಗಮನಕ್ಕಿಂತ ಮೊದಲೇ ವೈಶಾಖದ ಬೇಗೆ ಅತೀವವಾಗಿ ಹಳ್ಳಿ ನಗರವೆಲ್ಲೆಡೆ ಹವಾಮಾನದ ವಿಪರೀತ ಪ್ರಕೋಪವು ಕಾಣತೊಡಗಿದೆ. ದೇಶಾದ್ಯಂತ ಹತ್ತು ರಾಜ್ಯಗಳ ಸುಮಾರು ಇನ್ನೂರಕ್ಕೂ ಹೆಚ್ಚು ಜಿಲ್ಲೆಗಳನ್ನು ಸರಕಾರವೇ ಬರಪೀಡಿತವೆಂದು ಘೋಷಿಸಿದೆ. ಮಹಾರಾಷ್ಟ್ರದ ಲಾಟೂರಿನಲ್ಲಿಯಂತೂ ನೀರಿನ ಆಭಾವದಿಂದಾಗಿ ಸಾಮಾಜಿಕ ತಳಮಳಗಳು ಎದ್ದೇಳಬಹುದೆಂದು ಅಲ್ಲಿನ ಆಡಳಿತವು ಅಪರಾಧ ಪ್ರಕ್ರಿಯಾ ಸಂಹಿತೆಯ ಸೆಕ್ಷನ್ 144 ಜ್ಯಾರಿಗೊಳಿಸಿದೆ. ಹಳ್ಳಿಯ ರೈತರು ನೀರಿಲ್ಲದೇ ಕೊರಗುತ್ತಿರುವಾಗ ಮನರಂಜನೆಯ ಕ್ರೀಡಾಕೂಟಗಳು ಯಾಕೆ ಎಂಬ ಚರ್ಚೆಗಳು ನಡೆಯುತ್ತಿವೆ. ನಮ್ಮ ನಾಡಿನ, ಮುಖ್ಯವಾಗಿ ಉತ್ತರ ಕರ್ನಾಟಕದ ಹಲವಾರು ಜಿಲ್ಲೆಗಳು ಬರಗಾಲಕ್ಕೆ ತುತ್ತಾಗಿವೆ. ಉಳುವ ಹೊಲಕ್ಕೆ ನೀರಿಲ್ಲ. ಕೃಷಿ ಕಾಯಕಕ್ಕೆ ನೆರವಾಗುವ ಜಾನುವಾರುಗಳಿಗೆ ನೀರಿಲ್ಲ. ಕುಡಿಯುವ ನೀರಿಗೆ ಬವಣೆ ಎದುರಾಗಿದೆ. ಜತೆಗೆ ಬಿಸಿಲಿನ ಬೇಗೆಯು ಬದುಕನ್ನು ಕಿತ್ತು ತಿನ್ನುತ್ತಿದೆ. ಸರಕಾರದ ಹಲವು ಯೋಜನೆಗಳು ಇಂದು ಕೂಡಾ ಜನರನ್ನು ತಲುಪುವಲ್ಲಿ ಯಶಸ್ವಿಯಾಗುತ್ತಿಲ್ಲ. ರಾಜ್ಯದಲ್ಲಿ ಭೀಕರ ಬರಗಾಲದಿಂದ ರೈತ ಸಮುದಾಯ ಆರ್ಥಿಕ ಸಂಕಷ್ಟದಲ್ಲಿದೆ. ರೈತರು ಸಾಲದ ಸುಳಿಯಿಂದ ಹೊರಬರಲಾಗದೇ, ಮುಂದಿನ ಜೀವನ ನಿರ್ವಹಣೆಗೆ ದಾರಿ ಕಾಣದೇ ಕಂಗೆಟ್ಟಿದ್ದಾರೆ.

ಸಾಮಾನ್ಯ ಜನರು ಬರ ಪರಿಸ್ಥಿತಿಯನ್ನು ಎದುರಿಸಲು ಸರಕಾರಗಳು ಸಹಾಯ ಮಾಡಬೇಕು. ಅವಶ್ಯ ಆಹಾರ ಮತ್ತು ಕುಡಿಯುವ ನೀರಿನ ಪೂರೈಕೆಯ ಜತೆ ಯಾವುದೇ ಆರ್ಥಿಕ ಹೊಣೆಯು ಜನರ ಮೇಲೆ ಬೀಳದಂತೆ ನೋಡಬೇಕಾಗುತ್ತದೆ. ಅದೇ ರೀತಿ, ಪ್ರಾಕೃತಿಕ ವೈಕೋಪ್ಯಗಳಿಂದ ಅಥವಾ ಹವಾಮಾನದ ಏರುಪೇರುಗಳಿಂದ ನಡೆಯುವ ನೀರಿನ ಅಭಾವ ಮತ್ತು ಬೆಳಹಾನಿಗಳನ್ನು ತಡೆಗಟ್ಟಲು ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕು. ವಿದ್ಯುತ್‌ಗಾಗಿ ಸೌರಶಕ್ತಿಯ ಬಳಕೆ, ಮರಗಳ ಸಂರಕ್ಷಣೆ ಮತ್ತು ಅಂತರ್ಜಲವನ್ನು ರಕ್ಷಿಸಿ ಜಲಬಿಕ್ಕಟ್ಟಿನ ಪರಿಹಾರ ಮೊದಲಾದ ಕಾರ್ಯಗಳನ್ನು ಮಾಡಬೇಕಾಗಿದೆ. ಪ್ರಕೃತಿಯನ್ನು ಅವಲಂಬಿಸಿ ಕೃಷಿ ನಡೆಸುವ ರೈತರ ಅನುಕೂಲಗಳನ್ನು ಗಮನದಲ್ಲಿರಿಸಿಕೊಂಡು ಕೃಷಿ ಉತ್ಪನ್ನಗಳಿಗೆ ಬೆಲೆಯನ್ನು ನಿಗದಿಪಡಿಸಬೇಕಾಗಿದೆ. ವಿಶ್ವ ವಾಣಿಜ್ಯ ಒಪ್ಪಂದಗಳು ಸ್ಥಳೀಯ ರೈತರಿಗೆ ಅನಾನುಕೂಲವಾಗದಂತಹ ನೀತಿಯನ್ನು ಸರಕಾರಗಳು ರೂಪಿಸಬೇಕಾಗಿದೆ. ನಾಡಿನ ಜನತೆ ಸಂಕಷ್ಟದಲ್ಲಿರುವಾಗ ದೇಶದ ರಾಜಧಾನಿ ದೆಹಲಿಯಲ್ಲಿರುವ ನಾವು ನಮ್ಮ ಜವಾಬ್ದಾರಿಯನ್ನು ಅರಿತುಕೊಂಡು ಸರಕಾರದ ಸವಲತ್ತುಗಳು ನಾಡಿನ ಜನತೆಗೆ ತಲುಪುವಂತೆ ಜನಪ್ರತಿನಿಧಿಗಳ ಮೂಲಕ ಕೈಜೋಡಿಸುವ ಕೆಲಸವನ್ನು ಮಾಡಬಹುದೇ ಎಂಬ ಚಿಂತನೆಯನ್ನು ಮಾಡಬೇಕಾಗಿದೆ. ಅ

*ಬಾಲಕೃಷ್ಣ ನಾಯ್ಕ್ ಡಿ.*

# ಅಸಾದಿ ಮತ್ತು ತೋನ್ಸೆ ಅವರೊಂದಿಗೆ ಸಂವಾದ




ಪ್ರಸಿದ್ಧ ನಾಟಕಕಾರ, ನಟ, ನಿರ್ದೇಶಕ ಮತ್ತು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತೋನ್ಸೆ ವಿಜಯ್‌ಕುಮಾರ್ ಶೆಟ್ಟಿ ಅವರು ಹಾಗೂ ಮೈಸೂರು ವಿಶ್ವವಿದ್ಯಾಲಯದ ರಾಜಕೀಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುವ ಪ್ರೊ. ಮುಜಾಫರ್ ಅಸಾದಿ ಅವರು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ಮಾರ್ಚ್ 13ರಂದು ಸಂವಾದ ಕಾರ್ಯಕ್ರಮವೊಂದನ್ನು ನಡೆಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು.

ತೋನ್ಸೆ ವಿಜಯಕುಮಾರ್ ಶೆಟ್ಟಿ ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ ತಾವು ಸ್ಥಾಪಿಸಿದ ಕಲಾ ಜಗತ್ತು, ಚಿಣ್ಣರ ಬಿಂಬ ಮತ್ತು ಅಮ್ಮ ಚಾವಡಿ ಮೊದಲಾದ ಸಂಸ್ಥೆಗಳ ಕುರಿತು ವಿವರಿಸಿದರು. ಮುಂಬೈಯಲ್ಲಿ 'ಚಿಣ್ಣರ ಬಿಂಬ'ವು ಪುಟಾಣಿ ಮಕ್ಕಳಿಗಾಗಿ (1 ರಿಂದ 9ನೇ ತರಗತಿವರೆಗೆ) ಪ್ರತಿ ಶನಿವಾರ, ಭಾನುವಾರ ಹಾಗೂ ಇನ್ನಿತರ ರಜಾ ದಿನಗಳಲ್ಲಿ ಶಿಬಿರಗಳು, ಕಮ್ಮಟಗಳು, ಪ್ರಯೋಗ ಶಾಲೆಗಳ ಮೂಲಕ ನಮ್ಮ ಪರಂಪರೆ ಮತ್ತು ಸಂಸ್ಕೃತಿಯ ಸಂಸ್ಕಾರವನ್ನು ಧಾರೆ ಎರೆಯಲು ಪ್ರಯತ್ನಿಸಿರುವ ಪ್ರಾಮಾಣಿಕ ಪ್ರಯತ್ನದ ಕುರಿತು ತಿಳಿಸಿದರು. ತಮ್ಮ ಜೀವನದ ಯಶಸ್ಸಿಗೆ ನಾಂದಿ ಹಾಕಿಕೊಟ್ಟ ತಮ್ಮ ಎಂ.ಜಿ.ಎಂ. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಕು.ಶಿ. ಹರಿದಾಸ ಭಟ್ಟರನ್ನು ಸ್ಮರಿಸಿದರು.

ಪ್ರೊ. ಅಸಾದಿಯವರು ಮಾತನಾಡುತ್ತ ತಾವು ಅಮೆರಿಕಾದ ಶಿಕಾಗೋ, ಯೇಲ್ ಯುನಿವರ್ಸಿಟಿಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ಹಣ ಮತ್ತು ಸೌಕರ್ಯಗಳ ಹೊರತಾಗಿ ತಾನು ಇಲ್ಲಿ ಏನನ್ನೂ ಸಾಧಿಸಲಾರೆ ಎಂಬ ಅರಿವು ಮೂಡಿ ಮರಳಿ ಕರ್ನಾಟಕಕ್ಕೆ ಬಂದು ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡದ ಹಳ್ಳಿ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಬರುವ ಮಕ್ಕಳಿಗೆ ಕನ್ನಡದಲ್ಲೇ ಎಲ್ಲಾ ಜ್ಞಾನವನ್ನು ಧಾರೆ ಎರೆಯುತ್ತಿರುವ ಕುರಿತು ಹೇಳಿದರು. ಸಮಾಜದ ಋಣ ತೀರಿಸಬೇಕೆಂಬ ದೃಢ ಸಂಕಲ್ಪದೊಂದಿಗೆ ತಮ್ಮ ಸುತ್ತಮುತ್ತಲಿನ ಜನರನ್ನು ಮುಖ್ಯವಾಗಿ ಬಡತನ, ಶೋಷಣೆ ಹಾಗು ಹಲವಾರು ಸಾಮಾಜಿಕ ಹಾಗೂ ಧಾರ್ಮಿಕ ದೌರ್ಜನ್ಯಕ್ಕೆ ಒಳಗಾಗಿರುವ ಅತ್ಯಂತ ಕೆಳವರ್ಗದ ಜನರಿಗೆ ಸಹಾಯವಾಗುವಂತೆ ಮುಸ್ಲಿಂ-ಮಹಿಳೆಯರು ಮತ್ತು ಮಕ್ಕಳಿಗಾಗಿ ಶಾಲೆಯೊಂದನ್ನು ತೆರೆದಿರುವ ಕುರಿತು ವಿವರಿಸಿದರು.

ಅದೇ ರೀತಿ ದೇವದಾಸಿ ಪದ್ಧತಿಯಿಂದ ಶೋಷಣೆಗೆ ಒಳಗಾಗಿರುವ ಸಮಾಜದಿಂದ ಶೋಷಿಸಲ್ಪಡುತ್ತಿರುವ ಅಂತಹ ನೂರಾರು ಮಕ್ಕಳನ್ನು ಒಟ್ಟುಗೂಡಿಸಿ ಒಂದು ವಿಶೇಷ ರೀತಿಯ ಶಾಲೆಯನ್ನು ನಡೆಸುತ್ತಿರುವುದರ ಕುರಿತು ಹೇಳಿದರು. ಈ ಎರಡೂ ಶಾಲೆಗಳನ್ನು ನಡೆಸುವ ಅವರ ಉದ್ದೇಶ ಈ ನತದೃಷ್ಟ ಮಕ್ಕಳಿಗೆ ಒಂದು ಭವ್ಯವಾದ ಭವಿಷ್ಯವನ್ನು ಕಲ್ಪಿಸುವುದರ ಜೊತೆಗೆ ಈ ಮಕ್ಕಳು ಸಂತೋಷದಿಂದ ಹಾಡಿ, ಕುಣಿದು, ಕನಸು ಕಾಣುವಂತಾಗಬೇಕು ಎನ್ನುತ್ತಾರೆ. ಇದಲ್ಲದೆ ಇವರ ವಿಶೇಷ ಜ್ಞಾನ ಹಾಗೂ ಅನುಭವಗಳನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಉಚ್ಚ ನ್ಯಾಯಾಲಯವು ಇವರನ್ನು ಮೈಸೂರಿನ ಸಮೀಪದಲ್ಲಿರುವ ಗುಡ್ಡಗಾಡಿನ ಜನಾಂಗವನ್ನು ಪುನರ್‌ವಸತಿ ಹಾಗೂ ಪುನರ್ ನಿರ್ಮಾಣ ಕಾರ್ಯಕ್ಕಾಗಿ ನೇಮಿಸಿದಾಗ ಪ್ರೊ. ಅಸಾದಿಯವರು ಸುಮಾರು 11 ಸಾವಿರ ನಿರಾಶ್ರಿತ ಗುಡ್ಡಗಾಡು ಜನಾಂಗದವರಿಗೆ ಉತ್ತಮ ಭವಿಷ್ಯ ನಿರ್ಮಾಣ ಮಾಡುವಲ್ಲಿ ವರದಿಯನ್ನು ತಯಾರಿಸಿದ ಕುರಿತು ಸಭಿಕರಿಗೆ ವಿವರಿಸಿದರು.

ಈ ಬೃಹತ್ ವರದಿಯನ್ನು ಗುಡ್ಡಗಾಡು ಜನರ ಸರ್ವತೋಮುಖ ಅಭಿವೃದ್ಧಿಗಾಗಿ, ದೇಶಕ್ಕೆ ಒಂದು ಮಾದರಿಯಾಗುವ ರೀತಿಯಲ್ಲಿ ಬರೆದಿರುವುದಾಗಿ ಅವರು ತಿಳಿಸಿದರು.

ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ, ವಿಜಯಕುಮಾರ್ ಶೆಟ್ಟಿ ಅವರ ಅಮೋಘ ಕೊಡುಗೆಯನ್ನು ಪ್ರಶಂಶಿಸಿದರು, ಅಲ್ಲದೆ ತಮ್ಮ ಒಂದು ಸಂಪೂರ್ಣ ನಾಟಕ ಉತ್ಸವವನ್ನು ದೆಹಲಿಯಲ್ಲಿ ನಡೆಸಿಕೊಡಬೇಕೆಂದು ಕೇಳಿಕೊಂಡರು. ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ನಡೆಸುತ್ತಿದ್ದ ಪ್ರೊ. ಅಸಾದಿಯವರು ದೆಹಲಿಯಲ್ಲಿ ಕನ್ನಡಕ್ಕಾಗಿ ನೀಡಿದ ಕೊಡುಗೆಗಳನ್ನು ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸ್ಮರಿಸಿದರು. ವಿಚಾರವಂತರಾದ ಅಸಾದಿಯವರು ಸಂಘದಲ್ಲಿ ಒಂದು ವಿಚಾರ ಸಂಕಿರಣವನ್ನು ನಡೆಸಿಕೊಡಬೇಕೆಂದು ಕೇಳಿಕೊಂಡರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಸಲ್ಲಿಸಿದರು. ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಸಖಾರಾಮ ಉಪ್ಪೂರು ಅವರು ನಿರೂಪಿಸಿದರು.

*ಸಖಾರಾಮ ಉಪ್ಪೂರು*

### ಮುಂಬೈ ಕನ್ನಡಿಗ ತೋನ್ಸೆ ವಿಜಯಕುಮಾರ್ ಶೆಟ್ಟಿ

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ತೋನ್ಸೆ ವಿಜಯ್‌ಕುಮಾರ್ ಶೆಟ್ಟಿ ಅವರು ತಮ್ಮ 60ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸುಮಾರು 12ಗಂಟೆಗಳಿಗೂ ಹೆಚ್ಚು ಕಾಲ ಸತತವಾಗಿ 60 ವಿಭಿನ್ನ ಪಾತ್ರಗಳನ್ನು ಅಭಿನಯಿಸಿ 'ಲಿಮ್ಕಾ ಬುಕ್ ಆಫ್ ರೆಕಾರ್ಡ್'ನಲ್ಲಿ ದಾಖಲೆ ನಿರ್ಮಿಸಿದ್ದಾರೆ. ಬ್ಯಾಂಕ್ ಉದ್ಯೋಗದ ಮೂಲಕ ಮುಂಬಯಿಗೆ ಬಂದ ಶೆಟ್ಟರು 1978ರಿಂದ ಸತತವಾಗಿ ನಾಟಕ, ರಂಗತರಬೇತಿ, ಕಲೆ, ಸಂಸ್ಕೃತಿ, ನಾಡು-ನುಡಿಗಾಗಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

### ಪ್ರೊ. ಮುಜಾಫರ್ ಅಸಾದಿ

ತಮ್ಮ ವಿದ್ಯಾರ್ಥಿ ದಿಸೆಯಿಂದಲೇ ಅತ್ಯಂತ ಸೃಜನಶೀಲರಾಗಿರುವ ಮುಜಾಫರ್ ಅವರು ಹಲವಾರು ಕವನ, ಕಥೆ, ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಅಸಾದಿಯವರು ಹಲವಾರು ಒತ್ತಡಗಳ ನಡುವೆಯೂ ಯಾವ ಆಮಿಷ, ಭಯ ಹಾಗೂ ರಾಜಕೀಯ ಒತ್ತಡಕ್ಕೆ ಒಳಗಾಗದೆ 10ವರ್ಷಗಳ ಕಾಲ ನಿರಂತರವಾಗಿ ದುಡಿದು, ಗುಡ್ಡಗಾಡಿನ ಜನಾಂಗದ ಕುರಿತು ಸಂಶೋಧನೆ ಮಾಡಿ ಸ್ವತಂತ್ರವಾದ ಸತ್ಯ ಹಾಗೂ ನ್ಯಾಯದ ತಳಹದಿಯ ಮೇಲೆ ಒಂದು ವರದಿಯನ್ನು ಕರ್ನಾಟಕದ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ಜವಾಹರಲಾಲ್ ವಿಶ್ವವಿದ್ಯಾಲಯದಲ್ಲಿ ಕರ್ನಾಟಕದ ರೈತ ಚಳುವಳಿಯ ಕುರಿತಾಗಿ ಮಹಾಪ್ರಬಂಧವನ್ನು ಮಂಡಿಸಿ ಡಾಕ್ಟರೇಟ್ ಪಡೆದಿದ್ದಾರೆ.



# ದೆಹಲಿಯಲ್ಲಿ ಘಮಘಮಿಸಿದ ಕರ್ನಾಟಕದ ತಿಂಡಿ ತಿನಿಸುಗಳು

ದೆಹಲಿ ಕರ್ನಾಟಕ ಸಂಘವು ನಡೆಸಿದ ಕರ್ನಾಟಕದ ವಿವಿಧ ಜಿಲ್ಲೆಗಳನ್ನು ಪ್ರತಿನಿಧಿಸುವ ತಿಂಡಿ ತಿನಿಸುಗಳನ್ನೊಳಗೊಂಡ ಆಹಾರಮೇಳವನ್ನು ಕರ್ನಾಟಕ ಫುಡ್ ಸೆಂಟರ್‌ನ ಮಾಲೀಕರಾದ ಶ್ರೀ ಶೇಖರ್ ಎನ್. ಬಂಗೇರ ಅವರು ಸಿಹಿ ಹಂಚುವುದರ ಮೂಲಕ ಸಂಘದ ಆವರಣದಲ್ಲಿ ಇದೇ ಮಾರ್ಚ್ 20ರಂದು ಉದ್ಘಾಟಿಸಿದರು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಸಂಘದ ಪದಾಧಿಕಾರಿಗಳು ಉಪಸ್ಥಿತಿರಿದ್ದರು.

ಧಾರವಾಡ, ಗುಲಬರ್ಗಾ, ಬೀದರ, ಮಂಗಳೂರು, ಮೈಸೂರು, ಉಡುಪಿ, ಚಿಕ್ಕಮಗಳೂರು, ಹಾಸನ, ಕೋಲಾರ, ಬೆಂಗಳೂರು, ಶಿವಮೊಗ್ಗ, ಕೊಡಗು, ಉತ್ತರ ಕನ್ನಡ, ದಾವಣಗೆರೆ, ಮಂಡ್ಯ, ಬಿಜಾಪುರ, ಗದಗ ಮೊದಲಾದ ಜಿಲ್ಲೆಗಳಿಗೆ ಸೇರಿದ ಕನ್ನಡ ಕುಟುಂಬಗಳು ತಮ್ಮ ಮನೆಗಳಲ್ಲಿ ಅಡುಗೆಗಳನ್ನು ಮಾಡಿಕೊಂಡು ಸಂಘಕ್ಕೆ ತಂದು ಅಲ್ಲಿ ಆಯೋಜಿಸಿದ್ದ ಆಹಾರ ಮೇಳದಲ್ಲಿ ಪಾಲ್ಗೊಂಡಿದ್ದರು.

ಇಡ್ಲಿ, ತಟ್ಟೆ ಇಡ್ಲಿ, ವಡೆ, ಕಡುಬು, ಅಪ್ಪದ ಹಿಟ್ಟು, ದೋಸೆ, ಮೊಸರನ್ನ, ಬಿಸಿಬೇಳೆ ಬಾತ್, ಚಿತ್ರಾನ್ನ, ಪುಲಾವ್, ಬಿರಿಯಾಣಿ, ರೊಟ್ಟಿ, ಜೋಳದ ರೊಟ್ಟಿ, ಸಜ್ಜಿ ರೊಟ್ಟಿ, ಅಕ್ಕಿರೊಟ್ಟಿ, ರಾಗಿಮುದ್ದೆ, ರೂಮಾಲಿ ರೊಟ್ಟಿ, ಸಾಗು, ಘಸಿ, ಸಾಂಬಾರು, ಹುಳಿ, ಹೀಗೆ ತರತರದ ಬಿಸಿಬಿಸಿಯಾದ ಖಾದ್ಯ ಪದಾರ್ಥಗಳು, ಸಿಹಿತಿಂಡಿ ತಿನಿಸುಗಳು, ಖಾರ, ನಮ್‌ಕೀನ್‌ಗಳು, ಮುಂಡಕ್ಕಿ, ಚುರುಮುರಿ, ಸಕ್ಕರೆ ಪೋಂಗಲ್, ಲಾಡು, ಉಂಡೆ, ಕಾಯಿ ಹೋಳಿಗೆ, ಸಜ್ಜಿಗೆ ಹೋಳಿಗೆ, ಬನ್ಸ್, ಕೋಡುಬಳೆ, ತೆಂಕೊಳಲ್, ಚಕ್ಕುಲಿ, ಮದ್ದೂರು ವಡೆ, ಮಸಾಲೆ ವಡೆ, ಕೋಳಿ, ಮಟನ್, ಮೀನು, ಕುಚಲಕ್ಕಿ ಅನ್ನ, ಸೇವಿಗೆ, ಒತ್ತು ಸೇವಿಗೆ, ಅವಲಕ್ಕಿ ಮೊದಲಾದ ವಿವಿಧ ಆಹಾರ ತಿಂಡಿ ಪದಾರ್ಥಗಳನ್ನು ಬಂದ ಜನರು ಆಸ್ವಾದಿಸಿದರು. ಎಳನೀರು, ಮಜ್ಜಿಗೆ, ಮೊಸರು, ಬೆಣ್ಣೆ, ತುಪ್ಪ, ಬಗೆ ಬಗೆಯ ಚಟ್ನಿ, ಉಪ್ಪಿನಕಾಯಿ ಹಿಂಡಿ, ಚಟ್ನಿ ಪೌಡರ್‌ಗಳು, ಪಾಯಸ, ಖೀರು, ಬಾಳೆಹಣ್ಣಿನ ಹಲ್ವ, ಕೇಸರಿ ಬಾತ್ ಹೀಗೆ ಈ ಪಟ್ಟಿಗೆ ಕೊನೆಯೇ ಇಲ್ಲ.

ಸಂಘದ ಸದಸ್ಯರು, ಕರ್ನಾಟಕದ ವಿವಿದೆಡೆಯ ಆಹಾರಕ್ರಮಗಳಲ್ಲಿ ಆಸಕ್ತಿಯಿದ್ದ ವಿವಿಧ ವ್ಯಕ್ತಿಗಳು, ವಿವಿಧ ದೇಶಗಳ ದೂತವಾಸಗಳಲ್ಲಿ ಕಾರ್ಯನಿರತ ವಿದೇಶಿಯರು, ಅಥಣಿ ಕ್ಷೇತ್ರದ ಶಾಸಕರಾದ ಶ್ರೀ ಲಕ್ಷ್ಮಣ ಸವದಿ ಸೇರಿದಂತೆ ರಾಜಕೀಯ ವ್ಯಕ್ತಿಗಳು, ಭಾರತ ಆಡಳಿತ


















ಸೇವೆಯಲ್ಲಿರುವ ಅಧಿಕಾರಿಗಳು ಮೊದಲಾದವರು ಕರ್ನಾಟಕದ ಆಹಾರವನ್ನು ಸವಿದರು.

ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ರಾಧಾಕೃಷ್ಣ, ಹಾಗೂ ಶ್ರೀಮತಿ ಜಮುನಾ ಸಿ. ಮಠದ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರ ವಿಶೇಷ ಮುತುವರ್ಜಿಯಲ್ಲಿ ರೂಪುಗೊಂಡ ಈ ಕಾರ್ಯಕ್ರಮಕ್ಕೆ ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಅತ್ಯಂತ ಸಮರ್ಪಕವಾಗಿ ಸ್ಪಂದಿಸಿ ಸಹಕರಿಸಿದರು. ಸಂಘದ ಸಿಬ್ಬಂದಿಗಳು ಅವಿರತ ದುಡಿತದ ಮೂಲಕ ಹಾಗೂ ಅದ್ಭುತವಾದ ಆಹಾರ ಪದಾರ್ಥಗಳನ್ನು ಮನೆಯಲ್ಲಿ ಮಾಡಿಕೊಂಡು ಬಂದ ಸಂಘದ ಸದಸ್ಯರುಗಳ ಮತ್ತು ಅವರ ಕುಟುಂಬದವರು ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದರು.

ಈ ವರ್ಷದ ಜನವರಿ 31ರಂದು ಮೀರಟ್‌ನ ಹಸ್ತಿನಾಪುರಕ್ಕೆ ಅದ್ಭುತವಾದ ಪಿಕ್‌ನಿಕ್ ಅನ್ನು ಆಯೋಜಿಸಿ ಜಯಭೇರಿ ಹೊಡೆದ ಬೆನ್ನಲ್ಲೇ ಇಂತಹ ಒಂದು ಯಶಸ್ವೀ ಕರ್ನಾಟಕ ಫುಡ್ ಫೆಸ್ಟಿವಲ್ ಅನ್ನು ಸಂಘದಲ್ಲಿ ಪ್ರಥಮ ಬಾರಿಗೆ ಆಯೋಜಿಸುವುದರ ಮೂಲಕ ದೆಹಲಿ ಕರ್ನಾಟಕ ಸಂಘವು ಕನ್ನಡಿಗರೆಲ್ಲರ ಮನಗೆಲ್ಲುವ ಮತ್ತೊಂದು ಮಹತ್ತರ ಹೆಜ್ಜೆಯನ್ನಿಟ್ಟಿದೆ ಎಂದು ಭಾಗವಹಿಸಿದ ಬಹಳಷ್ಟು ಮಂದಿ ಅಭಿಪ್ರಾಯ ವ್ಯಕ್ತ ಪಡಿಸಿದರು. ಇಂತಹ ವಿಶೇಷವಾದ ಮತ್ತು ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಸಂಘವು ಮುಂಬರುವ ದಿನಗಳಲ್ಲಿ ಇನಖಿಫ್ಞೂ ಹೆಚ್ಚು ಹೆಚ್ಚಾಗಿ ನಡೆಸಲಿ ಎಂದು ಅವರು ಆಶಿಸಿದ್ದಾರೆ. ಈ ಕಾರ್ಯಕ್ರಮದ ಮೂಲಕ ಕನ್ನಡ ನಾಡು-ನುಡಿ, ನೆಲ-ಜಲ ಮತ್ತೆ ಅಲ್ಲಿನ ಜನ ಹಾಗೂ ಆಹಾರ ಪದಾರ್ಥಗಳು, ತಿಂಡಿ ತಿನಿಸುಗಳು ಅದೆಷ್ಟು ಪ್ರಸಿದ್ಧ, ರುಚಿ ಹಾಗೂ ಸಿಹಿಯಾಗಿದೆ ಎಂಬ ಮಾತು ಮತ್ತೊಮ್ಮೆ ದೆಹಲಿಯಲ್ಲಿ ರುಜುವಾತಾಯಿತು.

ಇದೇ ಸಂದರ್ಭದಲ್ಲಿ ಸಂಘದ ಆವರಣದಲ್ಲಿ ನಿರಂತರವಾಗಿ ನಡೆಯುತ್ತಿದ್ದ ಗೊಂಬೆ ಕುಣಿತ ಮಕ್ಕಳು ಹಾಗೂ ಹಿರಿಯರೆಲ್ಲರನ್ನೂ ರಂಜಿಸಿ, ತನ್ನೆಡೆಗೆ ಆಕರ್ಷಿಸಿತು. ಅ

***ಸಖಾರಾಮ ಉಪ್ಪೂರು***

# ದೆಹಲಿ ಕರ್ನಾಟಕ ಸಂಘದಿಂದ

## ಪ್ರೊ. ಸುಧಾ ಪೈ ಮತ್ತು ಶ್ರೀಮತಿ ಆಶಾ ಹೆಗ್ಡೆ ಅವರಿಗೆ ಅಭಿನಂದನೆ

ದೆಹಲಿ ಕರ್ನಾಟಕ ಸಂಘದ ವತಿಯಿಂದ ಇತ್ತೀಚೆಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ನಿವೃತ್ತ ರೆಕ್ಟರ್ ಪ್ರೊ. ಸುಧಾ ಪೈ ಮತ್ತು ಅಂತರರಾಷ್ಟ್ರೀಯ ಬಾಸ್ಕೆಟ್ ಬಾಲ್ ಆಟಗಾರ್ತಿ ಶ್ರೀಮತಿ ಆಶಾ ಹೆಗ್ಡೆ ಅವರನ್ನು ಸನ್ಮಾನಿಸಲಾಯಿತು. ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷೆ ಶ್ರೀಮತಿ ಮಂಜುಳಾ ಮಾನಸ ಅವರು ಸಂಘದ ಸ್ಮರಣಿಕೆ, ಹೂಗುಚ್ಛ, ಶಾಲು ಹಾಗೂ ಫಲ ಪುಷ್ಪಗಳನ್ನು ನೀಡಿ ಅಭಿನಂದಿಸಿದರು.

ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ, ದೆಹಲಿ ಕನಾಟಕ ಸಂಘವು ಕನ್ನಡ ಅಧ್ಯಯನ ಪೀಠವನ್ನು ಆರಂಭಿಸಲು ಸಮನ್ವಯ ಸಮಿತಿಯನ್ನು ರಚಿಸಿ ಕಾರ್ಯಪ್ರವೃತರಾದಾಗ, ಅದಕ್ಕೆ ಸ್ಪಂದಿಸಿ ಕನ್ನಡದ ಅಧ್ಯಯನ ಪೀಠವನ್ನು ಆರಂಭಿಸುವಲ್ಲಿ ಪ್ರೊ. ಸುಧಾ ಪೈ ಅವರ ಮಾರ್ಗದರ್ಶನ ಮತ್ತು ಕೊಡುಗೆ ಅಮೂಲ್ಯವಾದದ್ದು ಮಾತ್ರವಲ್ಲ ಪ್ರೊ. ಸುಧಾ ಪೈ ಅವರು ಇಲ್ಲದೇ ಇರುತ್ತಿದ್ದರೆ ಇಂದು ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠ ಆರಂಭಗೊಳ್ಳುತ್ತಿರಲಿಲ್ಲ ಎಂದರು.

ಕನ್ನಡದ ಆಟಗಾರ್ತಿಯೊಬ್ಬಳು ದೆಹಲಿಯಲ್ಲಿ ವಾಸವಾಗಿದ್ದು, ದೆಹಲಿ ರಾಜ್ಯದಿಂದ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸುತ್ತಿರುವ ಶ್ರೀಮತಿ ಆಶಾ ಹೆಗ್ಡೆ ಅವರ ಸಾಧನೆಯನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಶ್ರೀಮತಿ ಮಂಜುಳಾ ಮಾನಸ ಅವರು ಮಾತನಾಡಿ ಶ್ರೀಮತಿ ಸುಧಾ ಪೈ ಮತ್ತು ಶ್ರೀಮತಿ ಆಶಾ ಹೆಗ್ಡೆ ಅವರು ಮಾಡಿರುವ ಸಾಧನೆಗಳು ಇತರ ಹೊರನಾಡ ಕನ್ನಡಿಗರಿಗೆ ಮಾದರಿ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷರಾದ ಶ್ರೀಮತಿ ಎಸ್.ಸಿ. ಹೇಮಲತಾ, ಜಂಟಿ ಕಾರ್ಯದರ್ಶಿ, ಶ್ರೀಮತಿ ಜಮುನಾ ಸಿ. ಮಠದ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀಮತಿ ಪೂಜಾ ಪ್ರದೀಪ್, ಶ್ರೀಮತಿ ಸುಮಿತಾ ಮುರಗೋಡ ಅವರು ಉಪಸ್ಥಿತರಿದ್ದರು.

### ಸುಧಾ ಪೈ

ಪ್ರೊ. ಶ್ರೀಮತಿ ಸುಧಾ ಪೈ ಅವರು ಮೂಲತಃ ಮಂಗಳೂರಿನವರು, ಅವರ ತಂದೆಯವರು ಉತ್ತರ ಪ್ರದೇಶ ರಾಜ್ಯದ ವಿದ್ಯುತ್ ಬೋರ್ಡ್‌ನಲ್ಲಿ ಕೆಲಸ ಮಾಡುತ್ತಿದ್ದುದರಿಂದ ಬಾಲ್ಯ ಜೀವನ ಹಾಗೂ ವಿದ್ಯಾಭ್ಯಾಸ ಉತ್ತರ ಪ್ರದೇಶದಲ್ಲಿ ನಡೆಯಿತು. ನಂತರ ದೆಹಲಿಯಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ದೆಹಲಿ ವಿಶ್ವವಿದ್ಯಾಲಯದಿಂದ ಪಡೆದರು. ಸ್ನಾತಕೋತ್ತರ ಪದವಿಯ ನಂತರ ದೆಹಲಿಯ ಗಾರ್ಗಿ ಕಾಲೇಜ್ ಫಾರ್ ವುಮನ್‌ನಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಪ್ರಾರಂಭಿಸಿ 1975ರವರೆಗೆ ಸೇವೆ ಸಲ್ಲಿಸಿದರು. ಅದೇ ಸಮಯದಲ್ಲಿ ಎಂಫಿಲ್, ಮತ್ತು ನಂತರ ಪಿಎಚ್‌ಡಿಯನ್ನು 1980ರಲ್ಲಿ ಮಾಡಿದರು. 1980ರಲ್ಲಿ ಜೆ.ಎನ್.ಯು.ವಿನ ಸೆಂಟರ್ ಫಾರ್ ಪೊಲಿಟಿಕಲ್ ಸ್ಟಡೀಸ್‌ನ ಸ್ಕೂಲ್ ಆಫ್ ಸೋಸಿಯಲ್ ಸೈನ್ಸ್ ವಿಭಾಗದಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಸೇರಿದರು. ಅಲ್ಲಿಂದ ನಿವೃತ್ತಿಯ ತನಕ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದರು. 2005–2006ರಲ್ಲಿ ಸೆಂಟರ್‌ನ ಚೇರ್‌ಪರ್ಸನ್ ಹಾಗೂ 2011–2015ರವರೆಗೆ ರೆಕ್ಟರ್ (ಪ್ರೊ. ವೈಸ್ ಚಾನ್ಸಲರ್) ಕೂಡಾ ಆಗಿದ್ದರು. ಹಲವಾರು ಸಂಶೋಧನಾ ಕೇಂದ್ರಗಳ ಬೋರ್ಡ್‌ನಲ್ಲಿ ಸೇವೆ ಸಲ್ಲಿಸಿದ್ದಾರೆ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಶೋಧನಾ ಪ್ರಾಜೆಕ್ಟ್‌ನಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. 1996ರಲ್ಲಿ ಕೆನಾಡಾದ ಶಾಸ್ತ್ರಿ ಇಂಡೋ–ಕೆನಡಿಯನ್ ಸಂಸ್ಥೆಯಿಂದ ಫ್ಯಾಕಲ್ಟಿ ರೀಸರ್ಚ್ ಫೆಲೋಶಿಪ್, 2006–2009 ರವರೆಗೆ–ನವದೆಹಲಿಯ ನೆಹರೂ ಮೆಮೋರಿಯಲ್ ಮ್ಯೂಸಿಯಂ ಮತ್ತು ಲೈಬ್ರರಿ, ತೀನ್ ಮೂರ್ತಿ ನವದೆಹಲಿ–ಸೀನಿಯರ್ ಫೆಲೋಶಿಪ್. ದೇಶ ಹಾಗು ವಿದೇಶಗಳ ಸೆಮಿನಾರ್ ಮತ್ತು ಕಾನ್ಫರೆನ್ಸ್‌ಗಳಲ್ಲಿ ಭಾಗವಹಿಸಿದ್ದಾರೆ. ಬೇರೆ ಬೇರೆ ವಿಷಯಗಳಲ್ಲಿ ಬೋಧಿಸಿದ್ದಾರೆ ಮತ್ತು ಸಂಶೋಧನೆ ಮತ್ತು ಪುಸ್ತಕಗಳನ್ನು ಕೂಡ ಬರೆದಿದ್ದಾರೆ.

### ಆಶಾ ಹೆಗ್ಡೆ

ಶ್ರೀಮತಿ ಆಶಾ ಹೆಗ್ಡೆ ಅವರು ಅಂತರರಾಷ್ಟ್ರೀಯ ಬಾಸ್ಕೆಟ್‌ಬಾಲ್ ಆಟಗಾರ್ತಿ, ಮೂಲತ: ಉಡುಪಿಯ ಹೆಬ್ರಿಯ ಎಳಸಬೆಟ್ಟಿನವರು. 2006ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ಇವರು ಹಲವಾರು ದೇಶಗಳನ್ನು ಬಾಸ್ಕೆಟ್ ಬಾಲ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಮುಖ್ಯವಾಗಿ 2002–ಚೈನಾದಲ್ಲಿ ನಡೆದ ಯು–ಏಷಿಯನ್ ಬಾಸ್ಕೆಟ್ ಬಾಲ್ ಚಾಂಪಿಯನ್‌ಶಿಪ್. 2002ರಲ್ಲಿ ಚೈನಾ ಥೈಪೇಯಿನಲ್ಲಿ ನಡೆದ 16ನೇ ಬಾಸ್ಕೆಟ್ ಬಾಲ್ ಚಾಂಪಿಯನ್‌ಶಿಪ್, 2003ರಲ್ಲಿ ಮಲೇಶಿಯಾದಲ್ಲಿ ನಡೆದ ಪೋರ್ಟ್ ಡಿಕ್‌ಸನ್ ಇಂಟರ್‌ನ್ಯಾಷನಲ್ ಇನ್ವಿಟೇಷನ್ ಅಂತರರಾಷ್ಟ್ರೀಯ ಟೂರ್ನಿಯಲ್ಲಿ 3ನೇ ಸ್ಥಾನ, 2003ರಲ್ಲಿ ಮಲೇಶಿಯಾದಲ್ಲಿ ನಡೆದ ಏಷಿಯನ್ ಬಾಸ್ಕೆಟ್‌ಬಾಲ್ ಚಾಂಪಿಯನ್ ಪಿಪ್ (ಮಹಿಳಾ ಹಿರಿಯರ ವಿಭಾಗ), 2005–ಜಪಾನ್‌ನ ಸೆಂಡಾಯಿಯಲ್ಲಿ ನಡೆದ 21ನೇ ಇಂಟರ್‌ನ್ಯಾಷನಲ್ ಬಾಸ್ಕೆಟ್‌ಬಾಲ್ ಫೆಡರೇಶನ್ (ಫಿಬಾ) ಏಷಿಯನ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಪಿಪ್, 2005 ಚೈನಾದಲ್ಲಿ ನಡೆದ ಏಷಿಯನ್ ಬಾಸ್ಕೆಟ್‌ಬಾಲ್ ಚಾಂಪಿಯನ್‌ಪಿಪ್, 2006ರಲ್ಲಿ ಮೊದಲ ಸ್ಥಾನ – ಥೈಲ್ಯಾಂಡ್‌ನಲ್ಲಿ ನಡೆದ ಮೊದಲ ಪುಕೆಟ್ ಅಂತರರಾಷ್ಟ್ರೀಯ ಇಂಟರ್‌ನ್ಯಾಷನಲ್ ಇನ್ವಿಟೇಷನ್ ಟೂರ್ನಮೆಂಟ್‌ನಲ್ಲಿ, 2006ರಲ್ಲಿ ನ್ಯೂಜಿಲ್ಯಾಂಡ್‌ನಲ್ಲಿ ಮೂರು ಟೆಸ್ಟ್ ಆಟಗಳಲ್ಲಿ ಭಾಗವಹಿಸಿದ್ದಾರೆ, 2006ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಭಾಗವಹಿಸಿದ್ದಾರೆ. ಅ

*ಅಭಿಮತ ವರದಿ*





# ನಮ್ಮ ದೇಶ ಪುರುಷ ಪ್ರಧಾನವಾದದ್ದಲ್ಲ

## ಮಹಿಳಾ ಪ್ರಧಾನವಾದದ್ದು-ವಸಂತ ಶೆಟ್ಟಿ ಬೆಳ್ಳಾರೆ

ದೆಹಲಿ ಕರ್ನಾಟಕ ಸಂಘವು ಇದೇ ಮಾರ್ಚ್ 27ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಘದ ಆವರಣದಲ್ಲಿ ಆಚರಿಸಿತು. ಈ ಸಮಾರಂಭಕ್ಕೆ ಕರ್ನಾಟಕ ಮಹಿಳಾ ಆಯೋಗದ ಅಧ್ಯಕ್ಷೆಯಾದ ಶ್ರೀಮತಿ ಮಂಜುಳಾ ಮಾನಸ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ಮೊದಲಿಗೆ ದೆಹಲಿಯ ಮಹಿಳಾ ಕಲಾವಿದರುಗಳುಸಂಘದ ಆರ್ಟ್ ಗ್ಯಾಲರಿಯಲ್ಲಿ ಶ್ರೀಮತಿ ಜ್ಯೋತಿ ಪೊದ್ದಾರ್, ಶ್ರೀಮತಿ ಮೀನಾಕ್ಷಿ, ಕು. ನಂದಿನಿ ಸಿ. ಮಠದ, ಶ್ರೀಮತಿ ಜಮುನಾ ಸಿ. ಮಠದ, ಶ್ರೀಮತಿ ಗೀತಾ ರಮೇಶ್, ಶ್ರೀಮತಿ ಶಾಲನ್ ಮುರಗೋಡ, ಕು. ಭವ್ಯಶ್ರೀ, ಕು. ಪ್ರತೀಕ್ಷಾ, ಶ್ರೀಮತಿ ಸುಮಿತಾ ಮುರಗೋಡ ಅವರುಗಳ ಕಲಾಕೃತಿಗಳ ಪ್ರದರ್ಶನವನ್ನು ದೀಪ ಬೆಳಗಿಸಿ ಉದ್ಘಾಟಿಸಿ ಪ್ರದರ್ಶನವನ್ನು ವೀಕ್ಷಿಸಿದರು.

ಸಭಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು. ಈ ಸಭೆಯಲ್ಲಿ ದೆಹಲಿಯಲ್ಲಿದ್ದು ಸಾಧನೆಗೈದ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಿಂದ ನಿವೃತ್ತಿಗೊಂಡ ಹಾಗೂ ಜೆ ಏನ್ ಯು ದಲ್ಲಿ ಕನ್ನಡ ಪೀಠ ದ ಸ್ಥಾಪನೆಯ ಪ್ರಯತ್ನದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಮಾರ್ಗದರ್ಶನ ನೀಡಿದ ಡಾ. ಸುಧಾ ಪೈ ಮತ್ತು ದೆಹಲಿ ಬಾಸ್ಕೆಟ್‌ಬಾಲ್ ತಂಡದ ಸದಸ್ಯೆಯಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿರುವ ಉಡುಪಿಯವರಾದ ಯುವ ಬಾಸ್ಕೆಟ್‌ಬಾಲ್ ಆಟಗಾರ್ತಿ ಶ್ರೀಮತಿ ಆಶಾ ಹೆಗ್ಡೆ ಅವರನ್ನು ಸನ್ಮಾನಿಸಿದ್ದು ನಿಜಕ್ಕೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅರ್ಥಪೂರ್ಣಗೊಳಿಸಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಶ್ರೀಮತಿ ಮಂಜುಳಾ ಮಾನಸ ಅವರು ಅಂಕಿ ಸಂಖ್ಯಾ ವಿವರವನ್ನೊಳಗೊಂಡ ಮಹಿಳೆಯರಿಗೆ ಮುನ್ನೆಚ್ಚರಿಕೆ ಕ್ರಮಗಳ ವಿವರಗಳನ್ನು ನೀಡಿದರು. ಈ ವರ್ಷದಲ್ಲಿ 1200 ಕೇಸುಗಳು ದಾಖಲಾಗಿವೆ. 33% ಮಹಿಳಾ ಮೀಸಲಾತಿ ಇದ್ದರೂ ಅದನ್ನು ಸಂಪೂರ್ಣವಾಗಿ ಅಳವಡಿಸಲಾಗಿಲ್ಲ ಎಂದರು. ಕಛೇರಿಗಳಲ್ಲಿ ಮಹಿಳೆಗೆ ಆಗುವ ಹಿಂಸೆಯನ್ನು ತಡೆಯಬೇಕಾಗಿದೆ ಹಾಗೂ ಮಹಿಳೆಯರೂ ಕೂಡಾ ತಮ್ಮ ಮೇಲಾಗುವ ದೌರ್ಜನ್ಯವನ್ನು ಕಾನೂನು ರೀತ್ಯಾ ದಾಖಲಿಸುವಲ್ಲಿ ಮುಂದೆ ಬರಬೇಕು. ದೆಹಲಿ ನಿರ್ಭಯ ಖಾಂಡವನ್ನು ಹೆಸರಿಸುತ್ತಾ ಈ ಖಾಂಡದಿಂದ ಆದ ನಿರ್ಣಯ ಜನರನ್ನು ನಿರ್ಭೀತಗೊಳಿಸಬೇಕಿತ್ತು ಆದರೆ ಹಾಗೆ ಆಗಿಲ್ಲ ಎಂದು ಅಭಿಪ್ರಾಯಪಟ್ಟರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶ್ರೀಮತಿ ಸುಧಾ ಪೈ ಅವರು ಅಭಿನಂದನೆಗೆ ಸ್ಪಂದಿಸಿ ಮಾತನಾಡುತ್ತಾ ತಮ್ಮ ಕೃತಜ್ಞತೆಯನ್ನು





# ಮಹಿಳಾ ದಿನಾಚರಣೆಯಲ್ಲಿ ಗುರುಗಾಂವ್‌ನ ಮಹಿಳೆಯರು

ಗುರುಗಾಂವ್‌ನ ಮಹಿಳೆಯರ ಶ್ರೀಗಂಧ ತಂಡವು ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ತನ್ನ ಎರಡನೆಯ ಕಾರ್ಯಕ್ರಮವನ್ನು ನೀಡಿತು.

ತಂಡದ ಸದಸ್ಯೆಯರಾದ ರೂಪ ಕುಮಾರ್, ಸುಜಾತ ನಿಂಬಾಳ, ಶಿವಲೀಲಾ ರಾಜಕುಮಾರ, ಕವಿತಾ ಲಕ್ಷ್ಮಣ್, ಅನಿತ ಪ್ರಭಾಕರ್, ಸುನಂದ ದರ್ಗಾ, ಪ್ರಿಯದರ್ಶಿನಿ ಮರಿ ಬಸಪ್ಪ ಮತ್ತು ಶ್ರೀಲಕ್ಷ್ಮಿ ಚಂದ್ರಶೇಖರ್ ಜೋಳದರಾಶಿ ಮತ್ತು ಪ್ರಥಮ ಸಲ ಹಾಡು ಹಾಡಿ ಪ್ರಶಂಸೆ ಪಡೆದ ಮಾಲಿನಿ ಶ್ರೀನಾಥ್, ಜಾಹ್ನವಿ ಶ್ರೀನಿವಾಸ್, ಜ್ಯೋತಿ ಪುಷ್ಪ ಕೃಷ್ಣಪ್ಪ, ಶ್ರೀಲಕ್ಷ್ಮೀ ವೆಂಕಟೇಶ ಆಚಾರ್ಯ ಹಾಗು ಯಶಸ್ವಿನಿ ಎಲ್ಲರ ಅಭಿನಂದನೆಗೆ ಪಾತ್ರರಾದರು. ಗುರುಗಾಂವ್ ಶ್ರೀಗಂಧ ತಂಡದಿಂದ ಘಲ್ಲು ಘಲ್ಲೆನುತ ಹಾಡಿಗೆ ಮಾಡಿದ ನೃತ್ಯ ಪ್ರಂಗಾಣದಲ್ಲಿ ತುಂಬಿದ ಪ್ರೇಕ್ಷಕರನ್ನು ಮತ್ತೊಂದು ಲೋಕಕ್ಕೆ ಹೋಗುವಂತೆ ಮಾಡಿತ್ತು. ಮುಖ್ಯವಾಗಿ ಅವರ ಉಡುಪು ಬಹಳ ಆಕರ್ಷಣೆ ಆಗಿತ್ತು. ಗುರುಗಾಂವ್ ಮಹಿಳೆಯರು ಕೊನೆಯದಾಗಿ ಹಾಡಿದ ಹಾಡು ಪ್ರೇಕ್ಷಕರನ್ನು ಮಂತ್ರ ಮುಗ್ಧರನ್ನಾಗಿ ಮಾಡಿತು

ಮಹಿಳೆಯರು ಹದಿನೈದು ದಿನಗಳ ನಿರಂತರ ನೃತ್ಯ ಅಭ್ಯಾಸ ಮಾಡಿ ಯಶಸ್ವಿ ಪ್ರದರ್ಶನ ನೀಡಿದರು. ಕೆಲವರಂತೂ ಪ್ರತಿನಿತ್ಯ ಆರೇಳು ಕಿಲೋ ಮೀಟರ್ ದೂರದಿಂದ ಬಂದು ಅಭ್ಯಾಸ ಮಾಡುತ್ತಿದ್ದರು.

ಬೆಳಗಿನ ಎಲ್ಲ ಕೆಲಸಗಳನ್ನು ಮುಗಿಸಿ ಮಧ್ಯಾಹ್ನ ಎರಡೂವರೆಯ ಮೆಟ್ರೊ ರೈಲಿನಲ್ಲಿ ಸಂಘಕ್ಕೆ ಹೋಗಬೇಕೆಂದು ನಿರ್ಧಾರ ಆಗಿತ್ತು. ಹೊರಡುವ ಸರಿಯಾದ ಸಮಯಕ್ಕೆ ಕೃಷ್ಣಪ್ಪನವರು ಫೋನು ಮಾಡಿ ದೆಹಲಿ ಕರ್ನಾಟಕ ಸಂಘದಿಂದ ಬಸ್ಸಿನ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿ ಆಶ್ಚರ್ಯ ಪಡಿಸಿದರು. ಬಸ್ಸು ಸುಮಾರು 42 ಜನರಿಂದ ತುಂಬಿತ್ತು. ಬಸ್ಸು ದೆಹಲಿ ಸೇರಿದಾಗ ಸಂಜೆ ನಾಲ್ಕೂವರೆ ಆಗಿತ್ತು. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಉಪಾಧ್ಯಕ್ಷೆ ಶ್ರೀಮತಿ ಎಸ್.ಸಿ. ಹೇಮಲತ ಅವರು ನಮ್ಮೆಲ್ಲರನ್ನು ಆದರದಿಂದ ಸ್ವಾಗತಿಸಿದರು. ಬಸ್ಸಿನ ವ್ಯವಸ್ಥೆ ಮಾಡಿಸಿದ್ದಕ್ಕಾಗಿ ಸಂಘದ ಕಾರ್ಯಕಾರಣಿ ಸಮಿತಿಗೆ ಅಭಿನಂದನೆಗಳು. ಅ

*ಚಂದ್ರಶೇಖರ್ ಜೋಳದರಾಶಿ*

ಸಂಘ
ಮಹಿ
ದಿನಾಚ







ವ್ಯಕ್ತಪಡಿಸಿದರು. ಆಶಾ ಹೆಗ್ಡೆ ಅವರು ಮಾತನಾಡುತ್ತಾ ಬಾಲ್ಯದಿಂದ ತಮ್ಮ ಸಾಧನೆಯ ಬಗೆಗೆ ಸಭೆಯಲ್ಲಿ ಸೇರಿದ ಯುವ ಜನಾಂಗಕ್ಕೆ ಸ್ಫೂರ್ತಿದಾಯಕ ಮಾತನ್ನಾಡಿದರು. ಈವರೆಗೆ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಗದಿದ್ದಕ್ಕೆ ಖೇದ ವ್ಯಕ್ತಪಡಿಸಿ ಮುಂದಿನ ದಿನಗಳಲ್ಲಿ ಸಂಘದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದಾಗಿ ಹೇಳುತ್ತಾ ಸಂಘ ನೀಡಿದ ಅಭಿನಂದನೆಗೆ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತಾನಾಡಿದ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಪ್ರತಿ ವರ್ಷವೂ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾ ಬಂದಿದ್ದೇವೆ. ಹೆಚ್ಚಿನವರು ನಮ್ಮದು ಪುರುಷಪ್ರಧಾನ ಸಮಾಜ ಎಂದು ಹೇಳುತ್ತಾರೆ. ಆದರೆ ನಮ್ಮ ದೇಶ ಪುರುಷ ಪ್ರಧಾನವಾದದ್ದಲ್ಲ. ಉದಾಹರಣೆಗೆ ಪುರಾಣವನ್ನು ಅವಲೋಕಿಸಿದರೆ ಬ್ರಹ್ಮ, ವಿಷ್ಣು, ಮಹೇಶ್ವರರು ಕೂಡ ಸಮಸ್ಯೆಗಳು ಬಂದಾಗ ದೇವಿಯ ಮೊರೆ ಹೊಕ್ಕರು. ನಮ್ಮ ದೇಶವನ್ನು ಗಮನಿಸಿದರೆ ನಾವು ಭಾರತಾಂಬೆ ಎಂದು ಕರೆಯುತ್ತೇವೆ. ರಾಜ್ಯಕ್ಕೆ ಕನ್ನಡಾಂಬೆ ಎಂದು ಕರೆಯುತ್ತೇವೆ. ನಮ್ಮ ಸಮಾಜದಲ್ಲಿ ಹೆಚ್ಚಿನ ಗಂಡಸರು ಹೆಂಡತಿ ಹೇಳಿದ ಹಾಗೆ ಕೇಳುವವರೇ ಹೆಚ್ಚು. ಹೆಚ್ಚೇಕೆ ಮಕ್ಕಳೂ ಕೂಡಾ ತಾಯಿ ಹೇಳಿದ ಹಾಗೆ ಕೇಳುತ್ತಾರೆಯೇ ಹೊರತು ತಂದೆ ಹೇಳಿದೆ ಹಾಗೆ ಅಲ್ಲ. ಈ ರೀತಿಯಾಗಿ ನಮ್ಮ ದೇಶ ಪುರುಷ ಪ್ರಧಾನವಾದದ್ದಲ್ಲ, ಮಹಿಳಾ ಪ್ರಧಾನವಾದದ್ದು. ಆದರೆ ಮಹಿಳೆಯರೆಲ್ಲಾ ಸೇರಿ ನಮ್ಮ ಸಮಾಜ ಪುರುಷ ಪ್ರಧಾನ ಎಂದು ಮಾತನಾಡುತ್ತಲೇ ಬಂದಿರುವುದರಿಂದ ಪುರುಷರು ಪ್ರಧಾನವಾಗಿರುತ್ತಾರೆ. ಆದರೆ ವಾಸ್ತವವಾಗಿ ಅಲ್ಲ ಎಂಬುದು ನನ್ನ ಅಭಿಪ್ರಾಯ ಎಂದು ಹೇಳಿದರು. ಶ್ರೀಮತಿ ಮಾನಸ ಅವರು ಮಹಿಳೆಯರ ಮೇಲೆ ಕರ್ನಾಟಕದ ಯಾವುದೇ









ದಲ್ಲಿ
ಳಾ
ಕರಣೆ

ಭಾಗದಲ್ಲಿ ದೌರ್ಜನ್ಯವಾದರೂ ಸ್ಥಳಕ್ಕೆ ಧಾವಿಸಿ ಯೋಗ್ಯ ಕ್ರಮ ಕೈಗೊಳ್ಳುತ್ತಿದ್ದಾರೆ ಎಂಬುದು ಪ್ರಸ್ತುತ ಪತ್ರಿಕೆಗಳಿಂದ ತಿಳಿದು ಬರುತ್ತಿದೆ. ಹಾಗಾಗಿ ನಾನು ಈ ಇಂದಿನ ಸಭೆಗೆ ಮುಖ್ಯ ಅತಿಥಿಯಾಗಿ ಇವರೇ ಬರಬೇಕೆಂದು ಆಸೆಪಟ್ಟೆ. ಅದು ಇಂದು ಕೈಗೂಡಿದೆ ಎಂದು ಮಾನಸ ಅವರಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಈ ಸಂದರ್ಭದಲ್ಲಿ ಮಾತನಾಡಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು. ಉಪಾಧ್ಯಕ್ಷರಾದ ಶ್ರೀಮತಿ ಎಸ್.ಸಿ. ಹೇಮಲತಾ ಅವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಸಭಾ ಕಾರ್ಯಕ್ರಮವನ್ನು ಶ್ರೀಮತಿ ಪೂಜಾ ಪ್ರದೀಪ್ ನಡೆಸಿಕೊಟ್ಟರೆ, ಶ್ರೀಮತಿ ಜಮುನಾ ಮಠದ ಅವರು ಹನ್ನೆರಡನೇ ಶತಮಾನದ ಅಕ್ಕಮಹಾದೇವಿ ಇಂದ ಈವರೆಗೆ ಸ್ತ್ರೀ ಸ್ವಾತಂತ್ರ್ಯ ಹಾಗೂ ಸ್ತ್ರೀ ಸಮಾನತೆಗಾಗಿ ಶ್ರಮಿಸಿದ ಎಲ್ಲಾ ಮಹಿಳೆಯರಿಗೆ ಮತ್ತು ಮಹಿಳಾ ದಿನಾಚರಣೆಯನ್ನು ಆಚರಿಸಲು ನೆರೆದ ಸರ್ವರಿಗೂ ಕೃತಜ್ಞತೆ ಸಲ್ಲಿಸಿದರು.

ಸಭಾ ಕಾರ್ಯಕ್ರಮದ ನಂತರ –ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ, ಶ್ರೀಗಂಧ ತಂಡ, ಗುರ್‌ಗಾಂವ್ ಕನ್ನಡ ಸಂಘ, ದೆಹಲಿ ತುಳು ಸಿರಿ, ರಂಗ ತರಂಗ ನೃತ್ಯ ತಂಡ, ಜನಕಪುರಿ ಮಹಿಳಾ ಮಂಡಳಿ, ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಸದಸ್ಯೆಯರ ಮಕ್ಕಳಿಂದ, ಶ್ರೀಮತಿ ಎಸ್.ಸಿ. ಹೇಮಲತಾ ಮತ್ತು ಶ್ರೀಮತಿ ಜಮುನಾ ಸಿ. ಮಠದ ಅವರಿಂದ ವಾದ್ಯ, ಕನ್ನಡ ಕಂಪು ಗುರ್‌ಗಾಂವ್ ಕನ್ನಡತಿಯರು ಹೀಗೆ ದೆಹಲಿಯ ವಿವಿಧ ಕನ್ನಡ ಸಂಘ ಸಂಸ್ಥೆಗಳ ಮಹಿಳೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಅ

*ಶ್ರೀಮತಿ ಜಮುನಾ ಸಿ. ಮಠದ*











# ಪಾಕಿಸ್ತಾನದಲ್ಲಿ ಬಂಧಿಯಾಗಿರುವ ಕನ್ನಡಿಗನನ್ನು ಬಿಡುಗಡೆಗೊಳಿಸಲು ಸಂಘದಿಂದ ರಾಯಭಾರಿ ಭೇಟಿ

ಕೊಡಗು ಮೂಲದ ಕರ್ನಾಟಕದ ಪಿ.ಕೆ. ಯಶವಂತರವರು ಅಪಹರಣವಾಗಿ, ಪ್ರಸ್ತುತ ಪಾಕಿಸ್ತಾನದ ಲಾಹೋರ್ ಜೈಲಿನಲ್ಲಿ ಬಂಧಿತರಾಗಿದ್ದಾರೆ. ಈ ಸಂಬಂಧವಾಗಿ ಪಾಕಿಸ್ತಾನದ ರಾಯಭಾರಿಯಾಗಿರುವ ಶ್ರೀ ಅಬ್ದುಲ್ ಬಾಸಿಟ್ ಅವರನ್ನು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯವರು ಬಂಧಿತನ ಪೋಷಕರಾದ ಶ್ರೀಮತಿ ಮೀನಾಕ್ಷಿ ಹಾಗೂ ಶ್ರೀ ಕುಶಾಲಪ್ಪ ಅವರ ಜತೆ ಭೇಟಿಯಾದರು. ಮೂಲತಃ ಕರ್ನಾಟಕದ ನಿವಾಸಿಯಾಗಿರುವ ಪಿ.ಕೆ. ಯಶವಂತರ ಪೋಷಕರಿಗೆ ಸಾಂತ್ವನ ಹೇಳಿದ ಪಾಕಿಸ್ತಾನದ ರಾಯಭಾರಿ ಅಬ್ದುಲ್ ಬಾಸಿಟ್ ಅವರು ಸಾಧ್ಯವಾದಷ್ಟು ಬೇಗ ಯಶವಂತರನ್ನು ಭಾರತಕ್ಕೆ ಕರೆತರುವ ಭರವಸೆ ನೀಡಿದ್ದಾರೆ. ಮಾನವೀಯತೆಯ ದೃಷ್ಟಿಕೋನದಿಂದ ಇದೊಂದು ದುರಂತ ಎಂದ ಅವರು ಪಾಕಿಸ್ತಾನ ಸರಕಾರದ ಸಂಬಂಧಪಟ್ಟ ಇಲಾಖೆಗೆ ಈ ಬಗ್ಗೆ ತಿಳಿಸಿ ಶೀಘ್ರ ಬಿಡುಗಡೆಗೆ ಆಗ್ರಹಿಸುವುದಾಗಿ ಭರವಸೆ ನೀಡಿದ್ದಾರೆ. ಭಾರತ ಸರಕಾರ ಬೇಕಾದ ಮಾಹಿತಿ ಮತ್ತು ದಾಖಲೆಗಳನ್ನು ನೀಡಿದಾಗ ಇದು ಸಾಧ್ಯವಾಗುವುದು ಎಂದರು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಈ ಪ್ರಯತ್ನವನ್ನೂ ಕೂಡಾ ಶ್ರೀ ಬಾಸಿಟ್ ಅವರು ಶ್ಲಾಘಿಸಿದ್ದಾರೆ.

ಇದೇ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡ ಅವರನ್ನು ಭೇಟಿ ಮಾಡಿ ಕೂಡಲೇ ಈ ಕುರಿತು ಕರ್ನಾಟಕದ ಯಶವಂತ್‌ನನ್ನು ಬಿಡುಗಡೆ ಮಾಡಿಸಿ ಭಾರತಕ್ಕೆ ತರುವಲ್ಲಿ ತ್ವರಿತ ಕ್ರಮಕೈಗೊಳ್ಳಬೇಕೆಂದು ಮನವಿ ಮಾಡಲಾಯಿತು. ಮರುದಿನವೇ ವಿದೇಶಾಂಗ ಖಾತೆ ಸಚಿವರಾದ ಶ್ರೀಮತಿ ಸುಷ್ಮಾ ಸ್ವರಾಜ್

**ಕರ್ನಾಟಕದ ನಿವಾಸಿಯಾಗಿರುವ ಪಿ.ಕೆ. ಯಶವಂತರ ಪೋಷಕರಿಗೆ ಸಾಂತ್ವನ ಹೇಳಿದ ಪಾಕಿಸ್ತಾನದ ರಾಯಭಾರಿ ಅಬ್ದುಲ್ ಬಾಸಿಟ್ ಅವರು ಸಾಧ್ಯವಾದಷ್ಟು ಬೇಗ ಯಶವಂತರನ್ನು ಭಾರತಕ್ಕೆ ಕರೆತರುವ ಭರವಸೆ ನೀಡಿದ್ದಾರೆ**

ಅವರನ್ನು ಭೇಟಿಯಾಗಿ ಎಲ್ಲಾ ಮಾಹಿತಿಯನ್ನು ನೀಡಿ ಬಿಡುಗಡೆಗೆ ಬೇಕಾದ ಎಲ್ಲಾ ಕೆಲಸಗಳನ್ನು ಆದಷ್ಟು ಬೇಗ ಮಾಡುವಂತೆ ವಿನಂತಿಸಲಾಗುವುದೆಂದು ಶ್ರೀ ಸದಾನಂದ ಗೌಡ ಅವರು ಭರವಸೆ ನೀಡಿದರು.

ಈ ಭೇಟಿಯ ಸಂದರ್ಭದ ನಿಯೋಗದಲ್ಲಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಜಂಟೀ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಖಜಾಂಚಿ ಶ್ರೀ ಕೆ.ಎಸ್.ಜಿ. ಶೆಟ್ಟಿ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೋಡಿ ರಾಧಾಕೃಷ್ಣ, ಶ್ರೀ ವಿ.ವಿ. ಬಿರಾದಾರ ಮತ್ತು ಸಂಘದ ಸದಸ್ಯರುಗಳಾದ ಶ್ರೀ ರಾಘವೇಂದ್ರ ಹೆಚ್.ಡಿ. ಶ್ರೀ ರೋಷನ್ ಒಳಗೊಂಡಿದ್ದರು.

ಸಾಂಸ್ಕೃತಿಕ ಚಟುವಟಿಕೆಗಳನ್ನು ಹೊರತುಪಡಿಸಿ ಮಾನವೀಯತೆಯ ಮೌಲ್ಯಗಳನ್ನು ಕೂಡ ಎತ್ತಿ ಹಿಡಿಯುವಲ್ಲಿ ದೆಹಲಿ ಕರ್ನಾಟಕ ಸಂಘ ಈ ಮೂಲಕ ಯಶಸ್ವಿಯಾಗಿದೆ ಎಂದು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಹೇಳಿದರು. ಅ

*ಸಖಾರಾಮ ಉಪ್ಪೂರು*

ಇತ್ತೀಚೆಗಷ್ಟೇ ದೆಹಲಿ ಕರ್ನಾಟಕ ಸಂಘ ಪಾಕಿಸ್ತಾನದ ಲಾಹೋರ್‌ನ ಜೈಲಿನಲ್ಲಿರುವ ಕರ್ನಾಟಕದ ಕೊಡಗಿನ ಯಶವಂತ್‌ನನ್ನು ಬಿಡುಗಡೆ ಮಾಡಿಸಿ ಭಾರತಕ್ಕೆ ಕರೆತರಲು ಪಾಕಿಸ್ತಾನದ ಹೈಕಮೀಷನರ್ ಹಾಗೂ ಕೇಂದ್ರ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡ ಹಾಗೂ ಶ್ರೀಮತಿ ಸುಷ್ಮಾ ಸ್ವರಾಜ್ ಅವರನ್ನು ಭೇಟಿ ಮಾಡಿ ವಿನಂತಿಸಿಕೊಂಡಿತು.

ನಮ್ಮ ಪ್ರಯತ್ನದ ಫಲವಾಗಿ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ಪಾಕಿಸ್ತಾನದ ವಿದೇಶಾಂಗ ಸಚಿವರೊಂದಿಗೆ ಮಾತನಾಡಿದ್ದಾರೆ. ಯಶವಂತ್ ಅವರು ಮಾನಸಿಕವಾಗಿ ಅಸ್ವಸ್ಥರೋ ಅಲ್ಲವೋ ಎಂಬುದನ್ನು ಪರೀಕ್ಷಿಸಲು ವೈದ್ಯರುಗಳ ತಂಡವೊಂದನ್ನು ಪಾಕಿಸ್ತಾನಕ್ಕೆ ಕಳುಹಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ.

ಆದಷ್ಟು ಬೇಗನೆ ಯಶವಂತ್ ಬಿಡುಗಡೆಗೊಂಡು ಭಾರತಕ್ಕೆ ಬರಲಿ ಎಂದು ಶುಭ ಹಾರೈಸುತ್ತೇವೆ ಹಾಗೂ ನಮ್ಮ ವಿನಂತಿಗೆ ಕೂಡಲೇ ಸ್ಪಂದಿಸಿದ ಸಚಿವರುಗಳಾದ ಶ್ರೀಮತಿ ಸುಷ್ಮಾ ಸ್ವರಾಜ್ ಹಾಗೂ ಶ್ರೀ ಡಿ.ವಿ. ಸದಾನಂದ ಗೌಡ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ. ಅ

# ದುರ್ಮುಖಿ ನಾಮ ಸಂವತ್ಸರದ ಶುಭಾಶಯಗಳು



ಯುಗಾದಿ ಹಬ್ಬ ಅನಾದಿ ಕಾಲದಿಂದಲೂ ಆಚರಿಸಿಕೊಂಡು ಬರುತ್ತಿರುವ ಸಾಂಪ್ರದಾಯಿಕ ಹಾಗು ಪಾರಂಪರಿಕ ಹಬ್ಬ. ಸಿಹಿಯನ್ನು, ಕಹಿಯನ್ನು ಸಮಭಾಗವಾಗಿ ಹಂಚಿಕೊಳ್ಳುತ್ತಾ ಜೀವನದ ನೋವು, ನಲಿವುಗಳನ್ನು 'ಬಂದದ್ದೆಲ್ಲಾ ಬರಲಿ ಭಗವಂತನ ದಯೆಯೊಂದಿರಲಿ' ಎಂದು ಅನುಸರಿಸಬೇಕು ಎಂಬುದನ್ನು ತಿಳಿಸುವುದು, ಇದು ಮನು ಕುಲದ ಪರಮಧರ್ಮ, ಸುಖದಲ್ಲಿ ಹಿಗ್ಗದೇ, ದುಃಖದಲ್ಲಿ ಕುಗ್ಗದೇ, ಸಮಾನಾಂತರವ ಕಾಪಾಡುವುದನ್ನು ಕರುಣಿಸು ದೇವರೆ ಎಂದಷ್ಟೆ ಕೇಳಬೇಕು. ಯುಗಾದಿ ಋತು ಪರಿವರ್ತನೆಯ ಕಾಲ, ಹಣ್ಣೆಲೆ ಉದುರಿ ಚಿಗುರೆಲೆಗೆ ಚಿಗುರಲು ಅನುವುಮಾಡಿ ಕೊಟ್ಟು ಸ್ಥಾನ ಪಲ್ಲಟಮಾಡಿಕೊಡುತ್ತದೆ, ಇದು ಬಹಳ ಅರ್ಥಗರ್ಭಿತವಾದುದು ಹಾಗು ವಾಸ್ತವ ಕೂಡ, ದೇವರ ಸೃಷ್ಟಿ ಪ್ರಕೃತಿಯ ವೈರುಧ್ಯದ ಮುಂದೆ ಮನುಷ್ಯ ನಿಮಿತ್ತ ಮಾತ್ರ ಎಂಬುದು ಮನುಷ್ಯನ ಜೀವನದ ಪ್ರತಿ ಹೆಜ್ಜೆಯಲ್ಲಿಯೂ ನಿರೂಪಿಸಲಾಗಿದೆ. ಪ್ರಕೃತಿಯು ಹಣ್ಣೆಲೆ ಉದುರಿ ಹಳದಿಯ ಸೀರೆಯನುಟ್ಟು ಸೆರಗು ಹಾಸಿ ಮಲಗಿದ ಹಾಗೆ ಕಂಗೊಳಿಸುತ್ತಿದ್ದು ಅಲ್ಲೊಂದು ಇಲ್ಲೊಂದು ಹಸಿರು ಎಲೆಗಳು ಕಾಣಸಿಗುವುದು. ಸುಂದರ ನಾರಿಮಣಿ ಒಮ್ಮೆ ಸೆರಗೆತ್ತಿ ನೇವರಿಸಿ ಮೈಮೇಲೆ ಹೊದ್ದಾಗ ಸುಂದರತೆಯು ಹೆಚ್ಚಳವಾಗುವ ತಾರುಣ್ಯದ ಹೊಸ್ತಿಲಲ್ಲಿ ನಿಂತು ರತಿಕ್ರೀಡೆಗೆ ಆಹ್ವಾನಿಸುವಂತೆ ಕಂಗೊಳಿಸುತ್ತದೆ. ಕವಿ ಮನಸಿಗೆ ಮುದನೀಡುವ ನಿಸರ್ಗ ಚೇತನದ ಮನಸೋಲ್ಲಾಸದ ದೃಶ್ಯ ಕಣ್ತುಂಬಿ ಬರುತ್ತದೆ. ಹಣ್ಣೆಲೆ-ಚಿಗುರೆಲೆಯ ಈ ದ್ವಂದ್ವಗಳಲ್ಲಿ ಬಹಳಷ್ಟು ವಿಷಯಗಳು ರಿಂಗಣಿಸುತ್ತದೆ. ಹಣ್ಣೆಲೆಯ ನಿಸ್ವಾರ್ಥತೆ, ಬೌದ್ಧಿಕತೆ ಹಾಗೆಯೆ ಚಿಗುರೆಲೆಯ ಆಶಾ ಭಾವನೆ ಹೊಸದಾಗಿ ಬರುವುದಕ್ಕೆ ಆಸ್ವಾದ ನೀಡಿ ಅದರ ಸದ್ಬಳಕೆ ಮಾಡಿಕೊಳ್ಳುವುದು ಚಿಗುರೆಲೆಯ ಜವಾಬ್ದಾರಿಯಾಗಿರುತ್ತದೆ. ಇದು ಪ್ರಕೃತಿ ಮನುಕುಲಕ್ಕೆ ಉದಾಹರಣೆಯಾಗಿ ತಿಳಿಸುತ್ತಿದ್ದರೂ ಮನುಷ್ಯ ಅದನ್ನು ಗೌಣ ಮಾಡುತ್ತಿದ್ದಾನೆ ಏಕೆ? ಪ್ರಕೃತಿಯು ನಮಗೆ ನಿಘಂಟಿನೋಪಾದಿಯಲ್ಲಿ ಮಾರ್ಗದರ್ಶನ ನೀಡಿದರೂ ಅದನ್ನು ಅರ್ಥಮಾಡಿಕೊಳ್ಳದ ಜಾಣ ಮೌಢ್ಯನಾಗಿದ್ದಾನೆ.

ಬದಲಾಗುವ ಮನಸ್ಸು, ಹೃದಯವುಳ್ಳವರಿಗೆ ಪರಿವರ್ತನೆಯ ಕಾಲವೆಂದರೆ ಯುಗಾದಿ ದಿನ. ವರ್ಷಾರಂಭದಲ್ಲಿ ಮಾಡಿದ, ತೆಗೆದುಕೊಂಡ ತೀರ್ಮಾನ ಬಲವಾಗಿರುತ್ತದೆ. ನಮ್ಮ ಪೂರ್ವಜರು ಹೀಗೆ ಹಲವಾರು ನೀತಿ ನಿಯಮಗಳನ್ನು ನಮಗಾಗಿ ಹಾಕಿಕೊಟ್ಟು ಜೀವನ ಸುಗಮ ಮಾಡಿದ್ದಾರೆ. ನಮ್ಮ ನಿತ್ಯ ನಿರ್ಮಲ ನಿಸರ್ಗವು ಇದಕ್ಕೆ ಸ್ಪಂದಿಸುತ್ತದೆ. ಯುಗಾದಿಯು ನಮಗೆ ಹೊಸ ಚೇತನ ನೀಡಿದರೆ ಪರಿವರ್ತನೆಯು ಜೀವನ ಬದಲಿಸುತ್ತದೆ. ಹತ್ತು ಹಲವು ಮಜಲುಗಳನ್ನು ದಾಟಿ ನಿಲ್ಲುವ ಸಾಮರ್ಥ್ಯ ನಮ್ಮದಾಗಿಸುತ್ತದೆ.

ಜೀವನದ ಸರಿ-ತಪ್ಪುಗಳನ್ನು, ತಿರುವುಗಳನ್ನು ನೀಡುವುದು, ನಿರ್ಧರಿಸುವುದು ಭಗವಂತನಾದರೆ, ನಿಭಾಯಿಸುವುದು ಅನುಭವಿಸುವುದು ಮನುಷ್ಯ. ಆಗ ಮನುಷ್ಯರಾದ ನಾವು ಇಂತಹ ಪರಿಸ್ಥಿತಿಯಲ್ಲಿ ಹೆದರದೆ, ಧೃತಿಗೆಡದೆ ನಿಲ್ಲುವುದನ್ನು ಕರುಣಿಸು ಹರಿಯೇ ಎಂದಷ್ಟೇ ಕೇಳಿಕೊಳ್ಳಬೇಕು. ಕೆಲವನ್ನು ಕೇಳಿ ತಿಳಿಯಬೇಕು ಕೆಲವನ್ನು ಆ ಭಗವಂತ ನಮ್ಮ ಸ್ವಂತ ಅನುಭವಕ್ಕೆ ಬಿಡುತ್ತಾನೆ. ಮನುಷ್ಯನು ಆಧ್ಯಾತ್ಮಿಕನಂತೆ ಮಾತನಾಡಲು ಪರಿಸ್ಥಿತಿಗಳು ಅನುವು ಮಾಡಿಕೊಡುತ್ತದೆ. ಇವೆಲ್ಲಾ ಹೇಳಲು ಕಾರಣ ಕಾಲಚಕ್ರ. ಜೀವನ ಕಾಲಚಕ್ರದ ಏರಿಳಿತವು ಜ್ಞಾನಿಯನ್ನಾಗಿಸುತ್ತದೆ. 'ಹೊಸ ವೈದ್ಯನಿಗಿಂತ ಹಳೆಯ ರೋಗಿ ಉತ್ತಮ' ಎಂಬುದು ಇಲ್ಲಿ ಸೂಕ್ತ. ಏನೇ ಇರಲಿ ಅನುಭವವೆಂಬುದು ಮನುಷ್ಯನನ್ನು ಪರಿಪಕ್ವನನ್ನಾಗಿಸುತ್ತದೆ.

ನಿಮಗೆಲ್ಲಾ ಹೇಳುವುದು ಇಷ್ಟೇ ಮುಂಬರುವ ದಿನಗಳಲ್ಲಿ ಅಂದರೆ ವರ್ಷಾರಂಭದಲ್ಲಿ ಯುಗಾದಿಯ ದಿನದಂದು ಹೊಸ ಕಾಯಿದೆ ನಿಯಮಗಳನ್ನು ಹಾಕಿಕೊಂಡು ಕೇವಲ ನಮಗೆ ಮಾತ್ರವಲ್ಲ ಅನ್ಯರಿಗೂ ನಮ್ಮಿಂದ ಹಾನಿಯಾಗದಂತೆ ನೊವು ದುಃಖವಾಗದಂತೆ ಏನಾದರು ಒಳಿತಾಗುವಂತೆ ಮಾಡುವುದಕ್ಕೆ ಅನುವು ಮಾಡಿರಿ. ಸರ್ವರನ್ನು ಕರುಣಿಸೊ ಹರಿಯೇ ಸನ್ಮಾರ್ಗ, ಸದ್ಬುದ್ಧಿಯನ್ನು ಸರ್ವರಿಗೂ ಕರುಣಿಸು ಎಂದು ಪ್ರಾರ್ಥಿಸೋಣ.

'ದುರ್ಮುಖಿ ನಾಮ ಸಂವತ್ಸರ'ದಲ್ಲಿ ಸಕಲ ಜೀವರಾಶಿಗಳಿಗೂ ಒಳ್ಳೆಯದಾಗಲಿ. ಸುಖ ನೆಮ್ಮದಿ ದೊರಕಲಿ, ನೀವು ಜೀವಿಸಿ ಅನ್ಯರನ್ನು ಜೀವಿಸಲು ಬಿಡಿ. ಕೊನೆಯದಾಗಿ ವರ್ಷಾರಂಭದ ಪಂಚಾಂಗ ಎಂದು ನಂಬಿ ಕುಳಿತುಕೊಳ್ಳದೆ ಕಾಯಕ ಮಾಡಿ

ಮತ್ತೊಮ್ಮೆ ಎಲ್ಲರಿಗೂ 'ದುರ್ಮುಖಿ ನಾಮ ಸಂವತ್ಸರ'ದ ಯುಗಾದಿಯ ಶುಭಾಶಯಗಳು. ಅ

*ಎಂ.ಎಸ್. ಲಾವಣ್ಯ*

# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಿಂದ ಇದೇ ಫೆಬ್ರವರಿ 9ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ದೂರದರ್ಶನದ ಹೆಚ್ಚುವರಿ ಮಹಾ ನಿರ್ದೇಶಕರಾದ ಶ್ರೀಮತಿ ದೀಪ್ ಚಂದ್ರ ಅವರು ಆಗಮಿಸಿದ್ದರು.

ಅಧ್ಯಕ್ಷೆ ಶ್ರೀಮತಿ ರಾಧಾ ಕೌಜಲಗಿ ಅವರು ಅತಿಥಿಗಳನ್ನು ಸ್ವಾಗತಿಸಿದರು. ಜಂಟಿ ಕಾರ್ಯದರ್ಶಿ ಶ್ರೀಮತಿ ಎಸ್.ಸಿ. ಹೇಮಲತ ಗುಡ್ಡೇಗೌಡ ಅವರು ಅತಿಥಿಗಳ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು.




ಅತಿಥಿ ದೀಪ್‌ಚಂದ್ರ ಅವರು ತಮ್ಮ ಬಾಲ್ಯದ ದಿನಗಳಲ್ಲಿ ಕಂಡು ಅನುಭವಿಸಿದ ಅನುಭವಗಳನ್ನು ಹಂಚಿಕೊಂಡರು. ಅಮ್ಮನಿಗೆ ನಾನು ಶಾಲೆಗೆ ಫಸ್ಟ್ ಬಂದ್ರೆ ತಮ್ಮನ ಹಾಗೆ ನನ್ನನ್ನು ಹೆಚ್ಚು ಪ್ರೀತಿಸುತ್ತಾರೇನೋ ಅಂತ ಓದಿನಲ್ಲಿ ಮುಂದಿರುತ್ತಿದ್ದೆ. ತಾಯಂದಿರಿಗೆ ಮಕ್ಕಳೆಲ್ಲಾ ಒಂದೇ ಆದರೂ ಗಂಡು ಮಕ್ಕಳು ಎಂದರೆ ಸ್ವಲ್ಪ ಪ್ರೀತಿ ಜಾಸ್ತಿ ಇರುತ್ತೆ. ನನ್ನಪ್ಪ ತಮ್ಮನನ್ನು ಮಿಲಿಟರಿಗೆ ಸೇರಿಸುವ ಎಂದಿದ್ದಕ್ಕೆ ಬೇಡ ಅಂದ ನನ್ನ ಅಮ್ಮ, ಅಪ್ಪ ದೀಪಳನ್ನು ಕಳುಹಿಸುವ ಎಂದಿದ್ದಕ್ಕೆ ಹೂಂಗುಟ್ಟಿದ್ದರು. ಅವನಷ್ಟೇ ನನ್ನನ್ನೂ ಸಾಕಿ ಸಲಹಿದ್ದರು, ಯಾವ ಬೇಧವೂ ಇಲ್ಲದೆ. ಆದರೂ ಈ ವಿಷಯದಲ್ಲಿ ನನ್ನನ್ನು ಕಳುಹಿಸಲು ತಯಾರಿದ್ದು ತಮ್ಮನನ್ನು ಕಳುಹಿಸಲು ಒಪ್ಪಲಿಲ್ಲ. ನನ್ನ ತಾಯಿ ಸಾಮಾನ್ಯ ಮಹಿಳೆಯೇನಲ್ಲ ಆಕೆ ಒಂದು ಶಾಲೆಯ ಪ್ರಿನ್ಸಿಪಾಲ್ ಆಗಿದ್ದರು, ಎಂದರು.

ಶ್ರೀಮತಿ ಜಯಾ ಆಚಾರ್ಯ ಅವರು ಅತಿಥಿಗಳಿಗೆ ಪುಷ್ಪಗುಚ್ಛ ನೀಡಿ ಗೌರವಿಸಿದರು. ಕಾರ್ಯಕಾರಿ ಸಮಿತಿಯ ಸದಸ್ಯರುಗಳ ಅತಿಥಿಗಳಿಗೆ ನೆನಪಿನ ಕಾಣಿಕೆ ನೀಡಿ ಗೌರವಿಸಿದರು. ಶ್ರೀಮತಿ ರಾಜೇಶ್ವರಿ ಕಲ್ಲೂರು ಅವು ವಂದನಾರ್ಪಣೆ ಸಲ್ಲಿಸಿದರು. ಅ

*ಎಸ್.ಸಿ. ಹೇಮಲತಾ*



# ಜ್ಞಾನದ ಜಾಗತೀಕರಣ ಮತ್ತು ಕನ್ನಡ

ಕನ್ನಡ ಭಾಷೆಯು ಒಳಗಿನಿಂದ ಒಂದು ಬಗೆಯ ಒತ್ತಡಕ್ಕೆ ಒಳಗಾಗುತ್ತಿದ್ದರೆ, ಇನ್ನೊಂದೆಡೆಯಲ್ಲಿ ಅದು ಇಂದಿನ ಜಾಗತೀಕರಣ ಪ್ರಕ್ರಿಯೆಯ ತೀವ್ರ ಹೊಡೆತಕ್ಕೆ ಸಿಕ್ಕಿ ಇನ್ನೊಂದು ಬಗೆಯಲ್ಲಿ ನಲುಗುತ್ತಿದೆ. ನಮ್ಮ ದೇಶಕ್ಕೆ ರಾಷ್ಟ್ರೀಯ ಭಾಷಾ ನೀತಿ ಎಂಬುದು ಇಲ್ಲವಾದ್ದರಿಂದ ಈ ಗೊಂದಲವು ಭಾರತದ ಅನೇಕ ಭಾಷೆಗಳನ್ನು ಸುಲಭವಾಗಿ ಕೊಂದು ಹಾಕುವ ಮಟ್ಟಕ್ಕೆ ಬೆಳೆದಿದೆ.

ಖಚಿತವಾಗಿ ಇದು ಜಾಗತೀಕರಣದ ಕಾಲ. ಆದರೆ ಜಾಗತೀಕರಣವು ಭಾರತಕ್ಕೆ ಹೊಸದೇನೂ ಅಲ್ಲ. ಭಾರತದ ಭೌಗೋಳಿಕತೆಯು ಚಾರಿತ್ರಿಕವಾಗಿ ಅದನ್ನು ವಿಶ್ವದೊಂದಿಗೆ ಸಹಜವಾಗಿ ಜೋಡಿಸಿದೆ. ನಮ್ಮ ಊಟದ ಮೂಲಭೂತ ಘಟಕಗಳಾದ ಬಟಾಟೆ, ಟೊಮೆಟೋ, ಗೆಣಸು, ಜೋಳ, ಮೆಣಸು ಮೊದಲಾದುವುಗಳೆಲ್ಲ ಎಂದೋ ಹೊರದೇಶದಿಂದ ಬಂದು ನಮ್ಮ ಆಹಾರ ಪದ್ಧತಿಯಲ್ಲಿ ಸೇರಿಕೊಂಡಿವೆ. ಅನಾನಾಸು, ಪೇರಳೆ ಚಿಕ್ಕು ಮೊದಲಾದ ಹಣ್ಣುಗಳೂ ಮೂಲತಹ ನಮ್ಮವಲ್ಲ. ಬೆಳ್ಳುಳ್ಳಿ, ಅರಸಿನ, ಶುಂಠಿ ಮೊದಲಾದ ಪರಕೀಯ ಪದಾರ್ಥಗಳು ಇಂದು ನಮ್ಮ ದೇಸೀ ಎನ್ನಲಾದ ವೈದ್ಯ ಪದ್ಧತಿಯೊಂದಿಗೂ ಸೇರಿಕೊಂಡಿವೆ. ರೈಮೆಂಡೋ ಪಣಿಕ್ಕರ್ ಅವರ ಪ್ರಕಾರ ಚೈನಾದಲ್ಲಿ ಅತಿ ಪ್ರಾಚೀನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಅನ್ನದ ಉಂಡೆಯೇ ಇಂದು ಇಡ್ಲಿಯಾಗಿ ನಮ್ಮ ಮುಂದೆ ಕಾಣಿಸಿಕೊಂಡಿದೆ. ಹೀಗೆ ಹೊರಗಿನಿಂದ ಬಂದ ಈ ಪದಾರ್ಥಗಳನ್ನು ನಮ್ಮ ದೇವರುಗಳು ಇಂದಿಗೂ ಸ್ವೀಕರಿಸಲಾರವು.

ಇಷ್ಟಿದ್ದರೂ ತೊಂಭತ್ತರ ದಶಕದಿಂದೀಚೆಗೆ ಕಾಣಿಸಿಕೊಂಡ ಉದಾರೀಕರಣ, ಜಾಗತೀಕರಣ, ಖಾಸಗೀಕರಣ, ವ್ಯಾಪಾರೀಕರಣ ಹಾಗೂ ಮಾರುಕಟ್ಟೆಯ ನೀತಿಗಳು ಹಿಂದಿಗಿಂತ ತುಂಬಾ ಭಿನ್ನವಾಗಿದ್ದು ಜಗತ್ತನ್ನು ಅಮೂಲಾಗ್ರವಾಗಿ ಬದಲಾಯಿಸಿವೆ. ಮೇಲಿನ ಪರಿಭಾಷೆಗಳು ಮೂಲತಹ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿವೆಯಾದರೂ ಇಂದು ಅವು ನಮ್ಮ ಸಮಾಜವನ್ನು ಇಡಿಯಾಗಿ ಆಕ್ರಮಿಸಿಕೊಂಡಿವೆ. ಪರಿಣಾಮವಾಗಿ ಅವು ಇದೀಗ ಉನ್ನತ ಶಿಕ್ಷಣ ಕ್ಷೇತ್ರವನ್ನೂ ತನ್ನ ತೆಕ್ಕೆಗೆ ಒಗ್ಗಿಸಿಕೊಳ್ಳಲು ಸಜ್ಜಾಗಿದೆ. ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣ ಹಾಗೂ ಜ್ಞಾನೋತ್ಪತ್ತಿಯ ಅಂತಾರಾಷ್ಟ್ರೀಕರಣ ಇಂದಿನ ತೀವ್ರವಾದ ಪ್ರಕ್ರಿಯೆಗಳಲ್ಲಿ ಒಂದಾಗಿದೆ. 'ವಿಶ್ವದ ಕುರಿತಾದ ಭಾರತದ ತಿಳುವಳಿಕೆಗಳಿಗಾಗಿ ಹಾಗೂ ಭಾರತದ ಕುರಿತಾಗಿ ವಿಶ್ವದ ತಿಳುವಳಿಕೆಗಾಗಿ' ಈ ಅಂತಾರಾಷ್ಟ್ರೀಕರಣ ಪ್ರಕ್ರಿಯೆ ಬಹಳ ಅಗತ್ಯ ಎಂದು ಎಲ್ಲ ಸರಕಾರಗಳೂ ಇಂದು ಭಾವಿಸತೊಡಗಿವೆ. ಉನ್ನತ ಶಿಕ್ಷಣದ ಜಾಗತೀಕರಣದ ಪರವಾಗಿ ಯುನೆಸ್ಕೋ ಮತ್ತು ವಿಶ್ವವಿದ್ಯಾಲಯಗಳ ಅಂತಾರಾಷ್ಟ್ರೀಯ ಸಂಸ್ಥೆಯು ಜಂಟಿಯಾಗಿ ಪ್ರಬಲವಾದ ವಾದ ಮಂಡಿಸಿವೆ. ಸರಕಾರಗಳ ಪಾಲಿಗೆ 'ಅನುತ್ಪಾದಕ' ವಸ್ತುವಾಗಿರುವ ಉನ್ನತ ಶಿಕ್ಷಣವನ್ನು 'ಉತ್ಪಾದಕ ಅಥವಾ ಲಾಭದಾಯಕ' ವನ್ನಾಗಿ ಪರಿವರ್ತಿಸುವುದು ಈ ವಾದಗಳ ಉದ್ದೇಶ. ಇದನ್ನು ಗಂಭೀರವಾಗಿ ಪರಿಗಣಿಸಿದ ಸರಕಾರಗಳು ತಮ್ಮ ಆರ್ಥಿಕ ನಷ್ಟವನ್ನು ಕಡಿಮೆ ಮಾಡಿಕೊಳ್ಳಲು ಉನ್ನತ ಶಿಕ್ಷಣದ ಖಾಸಗೀಕರಣಕ್ಕೆ ಕ್ರಮ ಕೈಕೊಳ್ಳಲಾರಂಭಿಸಿದುವು. ಪರಿಣಾಮವಾಗಿ ಖಾಸಗಿ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯಗಳು, ಮತ್ತು ವಿದೇಶೀ ವಿಶ್ವವಿದ್ಯಾಲಯಗಳು ದೊಡ್ಡ ಪ್ರಮಾಣದಲ್ಲಿ ಉನ್ನತ ಶಿಕ್ಷಣದತ್ತ ಹೊರಳಿಕೊಂಡವು. ಅವು ತಮ್ಮ ಆರ್ಥಿಕ ಭದ್ರತೆಗಾಗಿ ನಯವಾದ ಬಗೆಯಲ್ಲಿ 'ಶುಲ್ಕ' ವಸೂಲು ಮಾಡಲು ಹೊರಟಿವೆ. ಈ ಪ್ರಕ್ರಿಯೆಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳೂ ಸರಕಾರಗಳೂ ಜೊತೆಯಾಗಿ ಹಣ ಮಾಡಲಾರಂಭಿಸಿದುವು. ಒಂದು ವರದಿಯ ಪ್ರಕಾರ 2013 –2014ರಲ್ಲಿ ಅಮೆರಿಕಾ ದೇಶದಲ್ಲಿ ಹೊರದೇಶದಿಂದ ಆಗಮಿಸಿದ 11,30,000 ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದು ಅದರಿಂದ ಆ ದೇಶಕ್ಕೆ 25 ಬಿಲಿಯನ್ ಡಾಲರ್ ಆದಾಯವಾಗಿದೆ. ಆಸ್ಟ್ರೇಲಿಯಾದಲ್ಲಿ 2001–2002ರಲ್ಲಿ ಸುಮಾರು 2 ಲಕ್ಷ ಹೊರದೇಶದ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದು ಆಗ ಆ ದೇಶದ ಆದಾಯ 4.2 ಬಿಲಿಯನ್ ಆಸ್ಟ್ರೇಲಿಯನ್ ಡಾಲರ್ ಆಗಿತ್ತು. ಜಾಗತೀಕರಣದ ಪರಿಣಾಮವಾಗಿ ಈ ಆದಾಯವು 2013–14 ರಲ್ಲಿ 14 ಬಿಲಿಯನ್ ಡಾಲರ್‌ಗೆ ಏರಿತು. ಸಣ್ಣ ದೇಶ ನ್ಯೂಜಿಲೇಂಡ್ ನಲ್ಲಿ 2001–2012ರಲ್ಲಿ ಸುಮಾರು ಒಂದು ಲಕ್ಷ ವಿದೇಶೀ ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದು ಆ ದೇಶದ ಬೊಕ್ಕಸಕ್ಕೆ 1.7 ಬಿಲಿಯನ್ ಡಾಲರ್ ಆದಾಯವಾಗಿದ್ದು 2013–14 ರಲ್ಲಿ ಅದು 6 ಬಿಲಿಯನ್ ಡಾಲರ್‌ಗಳಿಗೆ ಏರಿತು. ಈ ಬಗೆಯ ಆದಾಯದ ಕುರಿತು ಅಭಿವೃದ್ಧಿಶೀಲ  ದೇಶಗಳು ಕಣ್ಣು ಮುಚ್ಚಿ ಕುಳಿತಿರಲು ಸಾಧ್ಯವಿಲ್ಲ. ಏಕೆಂದರೆ 21ನೇ ಶತಮಾನದ ಮೊದಲ ದಶಕದಲ್ಲಿ ಉನ್ನತ ಶಿಕ್ಷಣವು ಬಿಲಿಯನ್ ಡಾಲರ್ ಆದಾಯದ ಪ್ರಶ್ನೆಯಾಗಿ ಮಾರ್ಪಟ್ಟಿದೆ.

ಭಾರತದಲ್ಲಿ ಶಿಕ್ಷಣದ ಅಂತಾರಾಷ್ಟ್ರೀಕರಣ ಪ್ರಕ್ರಿಯೆಯು ಗ್ಯಾಟ್ ಹಾಗೂ ಡಬ್ಲ್ಯುಟಿಒ ಒಪ್ಪಂದದ ಮೇರೆಗೆ ಆರಂಭವಾಯಿತು. ಎಪ್ರಿಲ್ 1, 2005 ರಂದು ಜ್ಯಾರಿಗೆ ಬಂದ ಈ ಒಪ್ಪಂದದ ಅನುಸಾರವಾಗಿ, 10ನೇ ಪಂಚವಾರ್ಷಿಕ ಯೋಜನೆಯಲ್ಲಿ (2002–2007) ಉನ್ನತ ಶಿಕ್ಷಣವನ್ನು 'Educational Services as sector of industry under GATS' ಎಂದು ಇತರ 12 ವಿಷಯಗಳೊಂದಿಗೆ ಸೇರಿಸಿ ಘೋಷಿಸಲಾಗಿದೆ. 11 ಮತ್ತು 12 ನೇ ಪಂಚವಾರ್ಷಿಕ ಯೋಜನೆಯಲ್ಲಿ 'ನಮ್ಮ ತರುಣರನ್ನು ಲೇಬರ್ ಮಾರುಕಟ್ಟೆಗೆ' ಸಿದ್ಧಪಡಿಸಬೇಕಾದ ಅಗತ್ಯವಿದೆ' ಎಂದು ಹೇಳಲಾಗಿದೆ ಮಾತ್ರವಲ್ಲ 2020ರ ಹೊತ್ತಿಗೆ ಚೀನಾ ದೇಶಕ್ಕೆ ಅಗತ್ಯವಾಗಿರುವ 40 ಕೋಟಿ ಪರಿಣಿತರನ್ನು ನಾವು ಸೃಷ್ಟಿ ಮಾಡಬೇಕಾಗಿದೆ ಎಂದೂ ಅದು ಘೋಷಿಸಿದೆ. ಹೀಗಾಗಿ ಈಗ ಇದು ಸರಕಾರದ ಒಂದು ಅಂಗೀಕೃತ ಮತ್ತು ಆದ್ಯತೆಯ ಯೋಜನೆಯಾಗಿದೆ. ಈ ಯೋಜನೆಯ ಭಾಗವಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗವು ಈ ಕೆಳಗಿನ ಮೂರು ಅಂಶಗಳನ್ನು ಜ್ಯಾರಿಗೆ  ತರಲು ಇದೀಗ ಕಾರ್ಯಪ್ರವೃತ್ತವಾಗಿದೆ. ಅವುಗಳೆಂದರೆ–

1. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ
2. ದೇಶೀಯ ಮತ್ತು ವಿದೇಶೀಯ ವಿದ್ಯಾಲಯಗಳು ಜಂಟಿಯಾಗಿ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು ಮತ್ತು
3. ಅತ್ಯುತ್ತಮ ಶಿಕ್ಷಣದ ರಫ್ತಿಗಾಗಿ ವಿಶೇಷ ವಲಯಗಳ ಸ್ಥಾಪನೆ

ಈ ಬದಲಾದ ಪರಿಸ್ಥಿತಿಗೆ ಅನುಗುಣವಾದ ಪಠ್ಯಕ್ರಮ, ಅಧ್ಯಯನದ ಅವಧಿ ಮತ್ತು ಮೌಲ್ಯಮಾಪನ ವಿಧಾನಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಸಿದ್ಧತೆ ನಡೆಯುತಿದೆ. ಮುಖ್ಯವಾಗಿ ಇದೀಗ ಆಗಲೇ ಅನೇಕ ಖಾಸಗಿ ವಿಶ್ವವಿದ್ಯಾಲಯಗಳು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿವೆ. ವಿದೇಶೀ ವಿಶ್ವವಿದ್ಯಾಲಯಗಳು ಭಾರತದಲ್ಲಿ ತಮ್ಮ ಅಧ್ಯಯನ ಕೇಂದ್ರಗಳನ್ನು ತೆರೆದಿವೆ. ವಿದೇಶೀ ಅಧ್ಯಾಪಕರುಗಳು ಮತ್ತು ಭಾರತೀಯ ಅಧ್ಯಾಪಕರುಗಳು ಒಟ್ಟಿಗೇ ಕೆಲಸ ಮಾಡಲು ಸಾಧ್ಯವಾಗುವ ಹಾಗೆ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ವಿಶ್ವವಿದ್ಯಾಲಯಗಳ ನಡುವೆ ಗುಣಾಂಕಗಳ (ಕ್ರೆಡಿಟ್ಸ್) ವರ್ಗಾವಣೆ ಸಾಧ್ಯವಾಗುತ್ತಿದೆ. ಈ ಕ್ರಮಗಳು ಉನ್ನತ ಶಿಕ್ಷಣದ ರೀತಿ ನೀತಿಗಳನ್ನು ಈಗಾಗಲೇ ಗಮನಾರ್ಹವಾಗಿ ಬದಲಾಯಿಸುತ್ತಿವೆ. ಸದ್ಯಕ್ಕೆ ಈ ಪ್ರಯೋಗವು ಕಾರ್ಪೋರೇಟ್ ಜಗತ್ತಿಗೆ ಬೇಕಾದ ಬುದ್ಧಿವಂತರನ್ನು ಮತ್ತು ಪರಿಣಿತ ಕೆಲಸಗಾರರನ್ನು ಸೃಷ್ಟಿಸಿಕೊಡುವಲ್ಲಿ ಸಫಲವಾಗಿವೆ.

ಇಂಥ ಬದಲಾದ ಪರಿಸ್ಥಿತಿಯಲ್ಲಿ ಸಾಮಾಜಿಕ ನ್ಯಾಯ ಎಂಬುದು ಚಲಾವಣೆಯಲ್ಲಿಲ್ಲದ ನಾಣ್ಯವಾಗುತ್ತಿದೆ.

ಜೊತೆಗೆ ಮಾನವಿಕಗಳು ಬೇಡಿಕೆಯಿಲ್ಲದ ಅಧ್ಯಯನ ಶಿಸ್ತುಗಳಾಗಿ ಪರಿವರ್ತನೆಗೊಂಡು ದುರ್ಬಲವಾಗುತ್ತಿವೆ. 10ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಂಸ್ಕೃತ ಮತ್ತು ಹಿಂದೀ ಭಾಷೆಯ ಅಭಿವೃದ್ಧಿಗೆ ಕೆಲವು ಯೋಜನೆಗಳನ್ನು ರೂಪಿಸಿದ್ದರೂ ಉಳಿದ ಭಾರತೀಯ ಭಾಷೆಗಳ ಬಗೆಗೆ ಅದು ದಿವ್ಯ ಮೌನವನ್ನು ತಾಳಿದೆ. 11 ಮತ್ತು 12 ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಭಾರತೀಯ ಭಾಷೆಗಳ ಬಗ್ಗೆ ಯಾಂತ್ರಿಕವಾಗಿ ನಾಲ್ಕು ಮಾತು ಹೇಳಲಾಗಿದೆಯಲ್ಲದೆ, ಅವುಗಳ ಅಭಿವೃದ್ಧಿಯ ಬಗೆಗೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ. ಹೀಗೆ ಮಾರುಕಟ್ಟೆಯ ಧ್ಯೇಯ ಧೋರಣೆಗಳೇ ಉನ್ನತ ಶಿಕ್ಷಣವನ್ನು ನಿಯಂತ್ರಿಸುತಿರುವ ಇಂದಿನ ಸಂದರ್ಭದಲ್ಲಿ ಕನ್ನಡದಂಥ ಸಣ್ಣ ಭಾಷೆಗಳ ಭವಿಷ್ಯವೇನು? ಎಂಬುದರ ಬಗ್ಗೆ ನಾವು ಗಂಭೀರವಾಗಿ ಚಿಂತಿಸಬೇಕು.

ಮೇಲೆ ಹೇಳಿದ ಮಾರುಕಟ್ಟೆ ಕೇಂದ್ರಿತ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನದ ಉತ್ಪತ್ತಿ ಮತ್ತು ವಿತರಣೆಯು ಅಂತಾರಾಷ್ಟ್ರೀಯವಾಗುವುದು ಅನಿವಾರ್ಯ. ಈ ಪ್ರಕ್ರಿಯೆಯಲ್ಲಿ ಆಳುವ ಶಕ್ತಿ ಶಾಲೀ ಭಾಷೆಯಾಗಿ ಇಂಗ್ಲಿಷ್ ಹೊರಹೊಮ್ಮಿದೆ. 'ಇಂಗ್ಲಿಷ್ ಭಾಷೆ ಕಲಿತರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು' ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಜನರೂ ಈ ಬೆಳವಣಿಗೆಯನ್ನು ಒಪ್ಪಿಕೊಂಡಿದ್ದಾರೆ. ಇದು ಕನ್ನಡವೂ ಸೇರಿದಂತೆ ಜಗತ್ತಿನ ಅನೇಕ ಸಣ್ಣ ಭಾಷೆಗಳ ಕುರಿತು ಆಯಾ ದೇಶದ ಸರಕಾರಗಳು ಮತ್ತು ಜನರು ನಿರ್ಲಕ್ಷ್ಯ ವಹಿಸುವಂತೆ ಮಾಡಿದೆ. ಇದರಿಂದ ಜಗತ್ತಿನಾದ್ಯಂತ ಇಂದು ಅನೇಕ ಭಾಷೆಗಳು ಅವಸಾನದ ಅಂಚಿಗೆ ಬಂದು ನಿಲ್ಲುವಂತಾಗಿದೆ. ಸಣ್ಣ ಭಾಷೆಗಳ ಧ್ವನಿ ಉಡುಗಿವೆ, ಅವುಗಳ ನಾಲಗೆ ಕಟ್ಟಿಹೋಗಿವೆ. ಉಳಿಯುವಿಕೆಗಾಗಿ ಅವು ಹೆಣಗಾಡುತ್ತಿವೆ. ಕಲಿಕೆ ಮತ್ತು ಉಪಯೋಗಗಳ ವಿಷಯದಲ್ಲಿ ಇಂಗ್ಲಿಷ್ ಸಾವಿರಾರು ಸಣ್ಣ ಭಾಷೆಗಳನ್ನು ಅಪಾಯದ ಅಂಚಿಗೆ ತಳ್ಳಿದೆ.

ಭಾರತದಲ್ಲಿ ಈ ಸಮಸ್ಯೆ ಇನ್ನೂ ತೀವ್ರತರವಾಗಿದ್ದರೂ, ಕೋಮುವಾದ, ಧರ್ಮ, ಭ್ರಷ್ಟಾಚಾರ, ಜಾತಿ, ರಾಜಕೀಯ, ಮತ್ತಿತರ ವಿಷಯಗಳ ಕುರಿತು ಇಲ್ಲಿ ಚರ್ಚೆ ನಡೆದ ಹಾಗೆ, ಅವಸಾನದ ಅಂಚಿನಲ್ಲಿರುವ ಭಾಷೆಗಳ ಉಳಿಯುವಿಕೆಯ ಕುರಿತು ಸಂವಾದ ನಡೆಯುತ್ತಿಲ್ಲ. ಇಂದು ಬಹಳ ಪ್ರಭಾವಶಾಲಿಯಾಗಿರುವ ಮಾಧ್ಯಮಗಳಿಗೂ ಈ ಕುರಿತು ಆಸಕ್ತಿಯಿಲ್ಲ. ಭಾಷೆಯ ಅವನತಿಯ ಅಪಾಯಗಳ ಕುರಿತು ತಿಳುವಳಿಕೆ ಇಲ್ಲದಿರುವುದೇ ಇದಕ್ಕೆ ಪ್ರಮುಖ ಕಾರಣ.

ಭಾರತದಲ್ಲಿ ಇದೀದ 22 ಭಾಷೆಗಳನ್ನು ಸಂವಿಧಾನದ ಎಂಟನೆ ಪರಿಚ್ಛೇದಕ್ಕೆ ಸೇರಿಸಿ ಅವುಗಳನ್ನು ಸಬಲೀಕರಣಗೊಳಿಸಲು ಯತ್ನಿಸಲಾಗಿದೆ. ಇದರಲ್ಲಿ 18 ಭಾಷೆಗಳು ಉತ್ತರ ಭಾರತಕ್ಕೆ ಸೇರಿದರೆ, ಕೇವಲ ನಾಲ್ಕು ಭಾಷೆಗಳು ದ್ರಾವಿಡ ಭಾಷಾ ವರ್ಗಕ್ಕೆ ಸೇರಿವೆ. ಈ ನಡುವೆ ಇತರ 38 ಭಾಷೆಗಳು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಲು ಸರಕಾರದ ಮೇಲೆ ಒತ್ತಡ ಹಾಕುತ್ತಿದ್ದು ಅದರಲ್ಲಿ ಕೇವಲ ಎರಡು (ತುಳು ಮತ್ತು ಕೊಡವ) ದ್ರಾವಿಡ ವರ್ಗಕ್ಕೆ ಸೇರಿವೆ. ಈ ಬೇಡಿಕೆಗಳನ್ನು ಸವಾಲಾಗಿ ಸ್ವೀಕರಿಸಿ, ಭಾಷೆಗಳ ಅಭಿವೃದ್ಧಿಗೆ ಕೆಲಸ ಮಾಡಬೇಕಾಗಿದ್ದ ಸರಕಾರ ಇದೀಗ ಎಂಟನೆಯ ಪರಿಚ್ಛೇದದ ಕೆಲವು ಸವಲತ್ತುಗಳನ್ನೇ ಕಡಿತಗೊಳಿಸಲು ಆರಂಭಿಸಿದೆ. ಉದಾಹರಣೆಗೆ, ಕೇಂದ್ರ ಲೋಕಸೇವಾ ಆಯೋಗವು ಎಂಟನೇ ಪರಿಚ್ಛೇದದಲ್ಲಿ ಹೊಸದಾಗಿ ಸೇರುವ ಭಾಷೆಗಳಲ್ಲಿ ಇದೀಗ ಪರೀಕ್ಷೆಗಳನ್ನು ನಡೆಸಬೇಕಾಗಿಲ್ಲ. ಅಂದರೆ, ಸ್ಪರ್ಧಿಯೊಬ್ಬನ ಮಾತೃ ಭಾಷೆಗೆ ಅಲ್ಲಿ ಅವಕಾಶವಿಲ್ಲ. ಸಣ್ಣ ಭಾಷೆಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಮಾಡುವವರಿಲ್ಲವೆಂದು ಅದು ಹೇಳುತ್ತದೆ. ಪ್ರಶ್ನೆ ಪತ್ರಿಕೆ ತಯಾರು ಮಾಡುವಂಥ ವಿದ್ವಾಂಸರ ಸೃಷ್ಟಿಗೆ ಸರಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದರೆ ಅದರ ಬಳಿ ಉತ್ತರವಿಲ್ಲ. ಇಂಥ ಪ್ರಕ್ರಿಯೆಗಳ ಜೊತೆಗೆ ಕೆಲವು ರಾಜ್ಯ ಸರಕಾರಗಳೂ ಸೇರಿಕೊಂಡಿವೆ. ಉದಾಹರಣೆಗೆ ದೆಹಲಿಯಲ್ಲಿ ಹಿಂದಿ, ಪಂಜಾಬಿ ಮತ್ತು ಉರ್ದು ಅಧಿಕೃತ ಭಾಷೆಗಳಾದರೆ, ಪಶ್ಚಿಮ ಬಂಗಾಲದಲ್ಲಿ ಬಾಂಗ್ಲಾ, ನೇಪಾಲಿ, ಹಿಂದಿ, ಉರ್ದು, ಮತ್ತು ಸಂತಾಲಿ ಭಾಷೆಗಳು ಅಧಿಕೃತ ರಾಜ್ಯ ಭಾಷೆಗಳಾಗಿವೆ. ತೆಲಂಗಾಣದಲ್ಲಿ ತೆಲುಗುವಿನ ಜೊತೆಗೆ ಉರ್ದುವನ್ನು ಅಂಗೀಕರಿಸಲಾಗಿದೆ. ಆದರೆ ಕರ್ನಾಟಕವು ತುಳು ಮತ್ತು ಕೊಡವ ಭಾಷೆಗಳನ್ನು ಅಧಿಕೃತ ರಾಜ್ಯ ಬಾಷೆಯಾಗಿ ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಿದೆ. ರಾಜ್ಯಕ್ಕೇ ಬೇಡವಾದ ಭಾಷೆಯನ್ನು ಕೇಂದ್ರ ಅಂಗೀಕರಿ ಸುವುದಾದರೂ ಹೇಗೆ? ಹೀಗೆ ನಮ್ಮ ಭಾಷಾ ರಾಜಕೀಯವು ಜಾಗತೀಕರಣ ಪ್ರಕ್ರಿಯೆಗಳೊಂದಿಗೆ ಸೇರಿಕೊಂಡು ಸಂಕೀರ್ಣವಾದ ಸನ್ನಿವೇಶ ನಿರ್ಮಾಣಗೊಂಡಿದೆ.

ಯೂನೆಸ್ಕೋವು ಸಿದ್ಧಪಡಿಸಿದ 'ಭಾಷೆಗಳ ಜಾಗತಿಕ ಭೂಪಟ' ವು ಭಾರತದಲ್ಲಿನ 172 ಭಾಷೆಗಳನ್ನು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದೂ, ಅದರಲ್ಲಿ 101 ಭಾಷೆಗಳನ್ನು ಅತೀವ ಅಪಾಯದಲ್ಲಿರುವ ಭಾಷೆಗಳೆಂದೂ 71 ಭಾಷೆಗಳನ್ನು ಎಲ್ಲ ಬಗೆಯ ಅಪಾಯಗಳಿಗೆ ಬಲಿಯಾಗುತ್ತಿರುವ ಭಾಷೆಗಳೆಂದೂ ಗುರುತಿಸಿದೆ. ಈ ಸಣ್ಣ ಭಾಷೆಗಳನ್ನಾಡುವ ಜನರಲ್ಲಿಯೂ ತಮ್ಮ ಮಾತೃ ಭಾಷೆಗಳ ಬಗೆಗೆ ಅಭಿಮಾನ ಕಡಿಮೆಯಾಗಿ, ಇಂಗ್ಲಿಷಿನ ಮೇಲೆ ಮೋಹ ಹೆಚ್ಚಾಗುತ್ತಲಿದೆ. ಹೀಗೆ ಭಾರತದಲ್ಲಿ ಸುಮಾರು ಮೂರು ಕೋಟಿಯ ಅರುವತ್ತು ಲಕ್ಷ ಜನಗಳ ಮಾತೃ ಭಾಷೆಗಳು ಇಂದು ಪತನಮುಖಿಯಾಗಿವೆ. ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಪ್ರಾದೇಶಿಕ ಭಾಷೆಗಳಿಗೆ ಮಹತ್ವ ಬಂದುವು, ಆದರೆ ಈ ಹಂತದಲ್ಲಿ ಪ್ರಾದೇಶಿಕ ಭಾಷೆಗಳ ಆಶ್ರಯದಲ್ಲಿರುವ, ಆದರೆ ಯಾವುದೇ ರಾಜ್ಯದ ಅಧಿಕೃತ ಭಾಷೆಗಳಲ್ಲದ ಸಣ್ಣ ಭಾಷೆಗಳು ತೀವ್ರ ಉಪೇಕ್ಷೆಗೆ ಒಳಗಾದುವು. ಸುಮಾರು ಒಂದು ಕೋಟಿ ಜನರಾಡುವ ತುಳುವನ್ನು ಕರ್ನಾಟಕ ರಾಜ್ಯ ಇಂದಿನವರೆಗೆ ಅಧಿಕೃತ ಭಾಷೆಯೆಂದೇ ಘೋಷಿಸಿಲ್ಲವಲ್ಲ! ಖಾಸಿ, ಜೈಂಟಿಯಾ, ಕೊಡವ, ಬ್ರಜ ಮೊದಲಾದ ಅನೇಕ ಸುಂದರ ಭಾಷೆಗಳ ಕತೆಯಾದರೂ ಅಷ್ಟೆ. ಕರ್ನಾಟಕದಲ್ಲಿ ಇವತ್ತಿಗೂ ತುಳು-ಕೊಡವದಂಥ ಭಾಷೆಗಳಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಪ್ರಾಧ್ಯಾಪಕರೇ ಇಲ್ಲ. ಕನ್ನಡದ ಅಧ್ಯಾಪಕರೇ ಈ ಭಾಷೆಗಳ ಉದ್ಧಾರದ ಕೆಲಸಗಳನ್ನೂ ಮಾಡಬೇಕಾಗಿದೆ. ದ್ರಾವಿಡಾ ಭಾಷಾ ವರ್ಗದಲ್ಲಿ ತಮಿಳು, ಮಲೆಯಾಳಂ, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಮಾತ್ರ ಸಾವಿರಾರು ಅಧ್ಯಾಪಕರಿದ್ದಾರೆ, ಉಳಿದ ಸುಮಾರು 24 ಸ್ವತಂತ್ರ ಭಾಷೆಗಳಲ್ಲಿ ಪ್ರಾಧ್ಯಾಪಕರು ಏಕಿಲ್ಲ.? ಒಟ್ಟಾರೆಯಾಗಿ ಇದರರ್ಥ ಇಷ್ಟೇ-

ಇಂದು ಸಣ್ಣ ಭಾಷೆಗಳ ಅಭಿವೃದ್ಧಿಯ ಕುರಿತು ಸರಕಾರಗಳಾಗಲೀ ವಿಶ್ವವಿದ್ಯಾಲಯಗಳಾಗಲೀ ಮಾಡಬೇಕಾದಷ್ಟು ಕೆಲಸಗಳನ್ನು ಮಾಡುತ್ತಿಲ್ಲ. ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಜನರ ಭಾಷೆಗಳು ಎಲ್ಲ ಸವಲತ್ತುಗಳನ್ನೂ ಪಡೆದುಕೊಳ್ಳುತ್ತಿವೆ. ದುರ್ಬಲರ ನಾಲಗೆ ಕಟ್ಟಿ ಹೋಗಿದೆ, ಅವರ ಭಾಷೆಗಳು ವಿನಾಶದತ್ತ ಚಲಿಸುತ್ತಿವೆ. ಸಂಸ್ಕೃತಿಯ ಬಗೆಗೆ ತಿಳುವಳಿಕೆಯಿಲ್ಲದ ಅಭಿವೃದ್ಧಿಯ ಪರಿಕಲ್ಪನೆಯು ಮೂಲತಹ ಅನಾಹುತಕಾರಿಯಾದುದು ಎಂಬುದನ್ನು ಜಗತ್ತಿನ್ನೂ ಅರ್ಥಮಾಡಿಕೊಂಡಿಲ್ಲ.

ಇಂಥ ಸಂದರ್ಭದಲ್ಲಿ ನಾವು ನಮ್ಮ ಸಂಶೋಧನೆಗಳ ಬಗೆಗೆ ಹೊಸದಾಗಿ ಯೋಚಿಸುವ ಕಾಲ ಬಂದಿದೆ. ಕನ್ನಡ ವಿಶ್ವವಿದ್ಯಾಲಯದಂಥ ಭಾಷಾ ಕೇಂದ್ರಿತ ಸಂಸ್ಥೆಯ ಜವಾಬ್ದಾರಿಗಳನ್ನೂ ನಾವು ಪುನರ್ ರೂಪಿಸಿಕೊಳ್ಳಬೇಕಾಗಿದೆ. ಒಂದೆಡೆ ಸಂಶೋಧನೆಯ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಇನ್ನೊಂದೆಡೆ ತಿಳುವಳಿಕೆಗಳು ಅಂತಾರಾಷ್ಟ್ರೀಯಗೊಳ್ಳುತ್ತಿರುವ ಆಧುನಿಕ ಪ್ರಕ್ರಿಯೆ, ಇವೆರಡರ ನಡುವೆ ನಾವು ಬದುಕುತ್ತಾ, ನಮ್ಮ ಧ್ವನಿಯು ಇತರರಿಗೆ ಕೇಳುವಂತೆ ಕೆಲಸ ಮಾಡಬೇಕಾಗಿದೆ. ನಮಗೆ ನಾವೇ ಮಾತಾಡಿಕೊಳ್ಳುವ ಕಾಲ ಮುಗಿದುಹೋಗಿದೆ. ಜಗತ್ತಿನೊಡನೆ ಗಂಭೀರವಾಗಿ ಸಂವಾದಿಸಬೇಕಾದ ಕಾಲ ಸನ್ನಿಹಿತವಾಗಿದೆ.



***(ಪ್ರೊ. ಪುರುಷೋತ್ತಮ ಬಿಳಿಮಲೆಯವರು 10.3. 2016ರಂದು ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆದ ನುಡಿ ಹಬ್ಬದಲ್ಲಿ ಮಾಡಿದ ಘಟಿಕೋತ್ಸವ ಭಾಷಣದ ಆಯ್ದ ಭಾಗ)***



# ಸ್ವರ್ಣವಲ್ಲಿ ಮಹಾಸ್ವಾಮಿಗಳಿಂದ 'ಪರಿಸರ ಮತ್ತು ಆಧ್ಯಾತ್ಮ' ಕುರಿತು ಉಪನ್ಯಾಸ

ಗೋಕರ್ಣ ಮಂಡಲದ ಆಶ್ರಯದಲ್ಲಿ ಸ್ವರ್ಣವಲ್ಲಿ ಮಹಾಸಂಸ್ಥಾನದ ಮಹಾಸ್ವಾಮಿಗಳಾದ ಶ್ರೀ ಶಂಕರಾಚಾರ್ಯ ಶ್ರೀಮದ್ ಜಗದ್ಗುರು ಸರ್ವಜ್ಞೇಂದ್ರ ಸರಸ್ವತಿಯವರು 'ಪರಿಸರ ಮತ್ತು ಆಧ್ಯಾತ್ಮ' ಎಂಬ ವಿಚಾರದ ಮೇಲೆ ಉಪನ್ಯಾಸವೊಂದನ್ನು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಇದೇ ಮಾರ್ಚ್ 11ರಂದು ನೀಡಿದರು.

ಮಹಾಸ್ವಾಮಿಗಳು 'ಅಂತರಂಗದ ಪರಿಸರವನ್ನು ನಮ್ಮ ಹಸಿರು ಪರಿಸರದೊಂದಿಗೆ ಹೇಗೆ ಸಮ್ಮಿಳನಗೊಳಿಸಬೇಕೆಂಬುದನ್ನು ದೃಷ್ಟಾಂತಗಳ ಮೂಲಕ ವಿವರಿಸಿದರು. ಇವೆರಡರ ಸಮ್ಮಿಳನವೇ 'ಆಧ್ಯಾತ್ಮ'ವೆಂದು ಅವರು ವಿವರಿಸುತ್ತ, ದಿನನಿತ್ಯದ ಬದುಕಿನಲ್ಲಿ ಇದನ್ನು ಒಳಗೊಳಿಸಿಕೊಳ್ಳುವುದು ಅಗತ್ಯವಾದದ್ದು ಎಂಬುದನ್ನು ವಿವರಿಸಿದರು. ಹೊರಗಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡಂತೆ ಕಂಡರೂ ಅಂತರಂಗದಲ್ಲಿ ನಾನಾ ಬಗೆಯ ಕ್ಲೇಶಗಳನ್ನು ಇರಿಸಿಕೊಂಡರೆ ಬದುಕಿನ ಸಮತೋಲನ ಎಲ್ಲಿಂದ ಬರಬೇಕು' ಎಂಬ ಪ್ರಶ್ನೆಯನ್ನು ಮುಂದಿಟ್ಟರು. ಜಗತ್ತು ಹಲವು ಬಗೆಗಳಲ್ಲಿ ಮುಂದುವರಿದಿದ್ದರೂ ಭಗವಂತನ ಶಕ್ತಿ ನಮ್ಮೆಲ್ಲರನ್ನೂ ಹಿಡಿದಿಟ್ಟಿದೆಯೆಂದರು. 'ಪರಿಸರವೆಂದರೆ ಬರಿ ಭೌತಿಕ ಪರಿಸರ ಮಾತ್ರವಲ್ಲ. ನಮ್ಮ ಅಂತರಂಗದ ಪರಿಸರವನ್ನು ಸದಾ ಭಗವಂತನ ನಾಮ ಸ್ಮರಣೆಯಿಂದ ಸ್ವಚ್ಛವಾಗಿ ಇಟ್ಟುಕೊಳ್ಳುವುದು ಅಗತ್ಯವಾಗಿದೆ' ಎಂದು ಹಲವಾರು ವೇದ–ಉಪನಿಷತ್ತುಗಳ ದೃಷ್ಟಾಂತಗಳ ಮೂಲಕ ವಿವರಿಸಿದರು.

ಗೋಕರ್ಣ ಮಂಡಲದ ಸದಸ್ಯರು, ದೆಹಲಿಯ ಕನ್ನಡಿಗರು ಹಾಗೂ ಮಹಾಸ್ವಾಮಿಗಳ ಭಕ್ತಾದಿಗಳು ಈ ಉಪನ್ಯಾಸವನ್ನು ಆಲಿಸಿದರು.

ಮಹಾಸ್ವಾಮಿಗಳನ್ನು ವೇದಘೋಷದ ಹಿನ್ನಲೆಯಲ್ಲಿ ಸಂಘದ ಮಹಾದ್ವಾರದಲ್ಲಿ ಗೋಕರ್ಣ ಮಂಡಲದ ಅಧ್ಯಕ್ಷರಾದ ಡಾ. ನಾರಾಯಣ ಭಟ್ಟರು ದೆಹಲಿಯ ಇತರ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಭಕ್ತಾದಿಗಳೊಂದಿಗೆ ಸೇರಿ ಪಾರಂಪರಿಕ ರೀತಿಯಲ್ಲಿ ಸ್ವಾಗತಿಸಿದರು. ಸಂಘದ ಸೆಮಿನಾರ್ ಹಾಲ್‌ನಲ್ಲಿ ಮಹಾಸ್ವಾಮಿಗಳ ಕಾರ್ಯಕ್ರಮಕ್ಕಾಗಿ ವಿಶೇಷವಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ವಿ.ಆರ್. ಗುಡ್ಡೇಗೌಡರು ಸ್ವಾಮೀಜಿಯವರಿಗೆ ಪುಷ್ಪಗುಚ್ಛ ಸಮರ್ಪಿಸಿ ಸ್ವಾಗತ ಕೋರಿದರು. ದೆಹಲಿ ಕರ್ನಾಟಕ ಸಂಘದ ಖಜಾಂಚಿ ಶ್ರೀ ಕೆ.ಎಸ್.ಜಿ ಶೆಟ್ಟಿಯವರು ಪುಷ್ಪಗುಚ್ಛ ಸಮರ್ಪಿಸಿದರು.

ತಮ್ಮ ಹಿಂದಿನ ದೆಹಲಿಯ ವಾಸ್ತವ್ಯದಲ್ಲಿ ದೆಹಲಿ ಕನ್ನಡ ಶಾಲೆಗೆ ಭೇಟಿ ಕೊಟ್ಟದ್ದನ್ನು ಮಹಾಸ್ವಾಮಿಗಳು ನೆನಪಿಸಿಕೊಂಡು ಶಾಲೆಯಲ್ಲಿ ಈಗ ನಡೆಯುತ್ತಿರುವ ಹಲವು ಕಾರ್ಯಕ್ರಮಗಳ ಕುರಿತಾಗಿ ಡಾ. ಗುಡ್ಡೇಗೌಡರೊಂದಿಗೆ ವಿಚಾರ–ವಿನಿಮಯ ನಡೆಸಿದರು. ದೆಹಲಿ ಕರ್ನಾಟಕ ಸಂಘದೊಂದಿಗೆ ಸ್ವರ್ಣವಲ್ಲಿ ಸಂಸ್ಥಾನದ ಬೇಡತಿ ಹಾಗೂ ಅಘನಾಶಿನಿ ನದಿಗಳ ಹೋರಾಟ ಸಮಿತಿಯ ಬಹು ದೊಡ್ಡ ಕಾರ್ಯಕ್ರಮ ಸಂಘದ ಆವರಣದಲ್ಲಿ 1995ರಲ್ಲಿ ನಡೆದದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡು, ದೆಹಲಿ ಕರ್ನಾಟಕ ಸಂಘ ಹಲವಾರು ಕರ್ನಾಟಕದ ಪರಿಸರ ಸಂಘಟನೆಗಳಿಗೆ ದೆಹಲಿಯಲ್ಲಿ ಬೆಂಬಲವನ್ನು ಕಾಲಕಾಲಕ್ಕೂ ನೀಡುತ್ತ ಬಂದಿದ್ದನ್ನು ಸಂಘದ ಮಾಜೀ ಅಧ್ಯಕ್ಷ, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರೊಫೆಸರ್ ಡಾ. ವೆಂಕಟಾಚಲ ಹೆಗಡೆಯವರು ಸ್ವಾಮೀಜಿಯವರ ಗಮನಕ್ಕೆ ತಂದರು.

ಕರ್ನಾಟಕ ಸರಕಾರದ ಪಶ್ಚಿಮ ಘಟ್ಟ ಕಾರ್ಯಪಡೆಯ ಅಧ್ಯಕ್ಷರಾಗಿದ್ದ ಶ್ರೀ ಅನಂತ ಅಶೀಸರರವರು ಸಹ ಈ 1995 ರ ದೆಹಲಿ ಕರ್ನಾಟಕ ಸಂಘದ ಬೇಡತಿ–ಅಘನಾಶಿನಿ ನದಿಯ ಕುರಿತಾದ ಕಾರ್ಯಕ್ರಮವನ್ನು ನೆನಪಿಸಿಕೊಂಡು, ಡಾ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ನಡೆದ ಈ ಮಹಾಸಭೆಯಲ್ಲಿ ಕರ್ನಾಟಕದ ಮೂರು ಮಾಜಿ ಮುಖ್ಯಮಂತ್ರಿಗಳು, ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ ಹಾಗೂ ಗುಂಡುರಾವ್ ಅವರು ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಭಾಗವಹಿಸಿದ್ದನ್ನು ಎಲ್ಲರ ಗಮನಕ್ಕೆ ತಂದರು. ಇವರೆಲ್ಲರ ಜೊತೆಗೆ ಉತ್ತರ ಕನ್ನಡದ ಅದರಲ್ಲೂ ಶಿರಸಿ ಮತ್ತು ಅಂಕೋಲಾ ಭಾಗದ ಜನಪ್ರತಿನಿಧಿಯಾಗಿದ್ದ ಅಜ್ಜಿಬಾಳ ವಕೀಲರು, ಆರ್.ಎಸ್. ಭಾಗವತರು ಹಾಗೂ ಇತರ ಹಿರಿಯ ಧುರೀಣರು ರಾಮಕೃಷ್ಣ ಹೆಗಡೆಯವರ ನೇತೃತ್ವದ ನಿಯೋಗದಲ್ಲಿ ಆಗಿನ ಯೋಜನಾ ಆಯೋಗದ ಅಧ್ಯಕ್ಷರಾಗಿದ್ದ ರಾಷ್ಟ್ರಪತಿ ಶ್ರೀ ಪ್ರಣವ್ ಮುಖರ್ಜಿಯವರನ್ನು ಭೇಟಿಯಾಗಿ ಈ ನದಿ ಯೋಜನೆಗಳ ದುಷ್ಪ್ರಭಾವ ಹೇಗೆ ಉತ್ತರ ಕನ್ನಡದ ಜನತೆಯ ಮೇಲೆ ಆಗುತ್ತಿದೆಯೆಂಬುದನ್ನು ಅವರ ಗಮನಕ್ಕೆ ತರುವುದರಲ್ಲಿ ಯಶಸ್ವಿಯಾದ ವಿವರ ನೀಡಿದರು.

ಇತ್ತ ದೆಹಲಿಯಲ್ಲಿ ಕರ್ನಾಟಕ ಸಂಘದ ಆವರಣದಲ್ಲಿ ಈ ಬಗೆಯ ನಿಯೋಗದ ಹಾಗೂ ಸಭೆಗಳ ಕಾರ್ಯಕ್ರಮಗಳು ನಡೆಯುತ್ತಿದ್ದರೆ, ಅತ್ತ ಉತ್ತರ ಕನ್ನಡದ ಶಿರಸಿ–ಯಲ್ಲಾಪುರದ ರಸ್ತೆಯಲ್ಲಿರುವ ಸೊಂದಾದಿಂದ ಯಲ್ಲಾಪುರ ಬಳಿಯಿರುವ ಮಾಗೋಡಿಗೆ ಸ್ವರ್ಣವಲ್ಲಿಯ ಮಹಾಸ್ವಾಮಿಗಳು ಪಾದಯಾತ್ರೆಯಲ್ಲಿ ತೊಡಗಿದ್ದು ದೇಶದಾದ್ಯಂತ ಸುದ್ದಿಯಾಗಿತ್ತು. ಸಾವಿರಾರು ಜನ ಈ ಪಾದಯಾತ್ರೆಯಲ್ಲಿ ಭಾಗಿಯಾದದ್ದು ಉತ್ತರ ಕನ್ನಡ ಜಿಲ್ಲೆಯ ಪರಿಸರ ಹೋರಾಟದಲ್ಲಿ ವಿಶಿಷ್ಟವಾದ ಘಟ್ಟವಾಗಿತ್ತು. ಈ ಹೋರಾಟದ ಫಲವಾಗಿ ಮಾಗೋಡಿನಲ್ಲಿ ಜಲವಿದ್ಯುತ್ ಯೋಜನೆಗಳಿಗೆಂದು ಕಟ್ಟಿಟ್ಟಿದ್ದ ಎಲ್ಲ ಸರಕಾರದ ನಿಗಮದ ಕಚೇರಿಗಳನ್ನು ಮುಚ್ಚಿ, ಆ ಜಾಗೆಯಲ್ಲಿ ಅರಣ್ಯ ಕಾಲೇಜನ್ನು ಹಾಗೂ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಯಿತು.

ಇದರಿಂದಾಗಿ ಸ್ವರ್ಣವಲ್ಲಿಯ ಈ ತರುಣ ಮಹಾಸ್ವಾಮಿಗಳನ್ನು 'ಪರಿಸರ ಸ್ವಾಮಿ' ಗಳೆಂದು ಜನಸಮುದಾಯ ಕರೆದು ಗುರುತಿಸುವಂತಾಯಿತು. ನಂತರದಲ್ಲಿ ಪರಿಸರವನ್ನು ಉಳಿಸಿ–ಬೆಳೆಸಲು ಅವರು ಕೈಗೊಂಡ ಹಲವಾರು ಜನಪರ ಕಾರ್ಯಕ್ರಮಗಳಿಂದಾಗಿ ಅವರಿಗೆ ಕರ್ನಾಟಕ ಸರಕಾರದ 'ಪರಿಸರ ಶ್ರೀ' ಪ್ರಶಸ್ತಿಯನ್ನೂ ನೀಡಲಾಯಿತು.

1996 ರಲ್ಲಿ ದೆಹಲಿಗೆ ಆಗಮಿಸಿ ಅವರು ಕಾನ್ಸ್ಟಿಟ್ಯೂಶನ್ ಕ್ಲಬ್‌ನಲ್ಲಿ ಆಯೋಜಿಸಿದ ಸರ್ವಧರ್ಮ ಸಮ್ಮೇಳನವು ಅವರಿಗೆ ಹೆಸರು ತಂದಿತು. ನಂತರ ಹಲವಾರು ಬಾರಿ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವರು ಉತ್ತರ ಭಾರತದ ಪ್ರವಾಸವನ್ನು ಕೈಗೊಂಡಿದ್ದಾರೆ. ಈ ಬಾರಿ ಶ್ರೀ ಶ್ರೀ ರವಿಶಂಕರರವರ ಮಹಾಸಾಂಸ್ಕೃತಿಕ ಸಮ್ಮೇಳನದಲ್ಲಿ ಭಾಗವಹಿಸಲು ಅವರು ದೆಹಲಿಗೆ ಬಂದಿದ್ದರು.

ಶ್ರೀ ಅನಂತ ಅಶೀಸ ಅವರು ಮಾತಾಡುತ್ತಾ ಭಾರತದ ಸಾಂಸ್ಕೃತಿಕ ಪರಂಪರೆಯಲ್ಲಿ, ಮುಖ್ಯವಾಗಿ ಸಂಸ್ಕೃತ ಹಾಗೂ ವೇದಾಂಗಗಳಲ್ಲಿ, ಅಪಾರ ಪಾಂಡಿತ್ಯವನ್ನು ಹೊಂದಿದ ಸ್ವರ್ಣವಲ್ಲಿ ಸ್ವಾಮಿಗಳು ಪ್ರಾರಂಭಿಸಿದ ಹಲವಾರು ಕಾರ್ಯಕ್ರಮಗಳ ವಿವರಗಳನ್ನು ನೀಡಿದರು. ಅವರು ಸ್ವರ್ಣವಲ್ಲಿ ಮಹಾಸಂಸ್ಥಾನದ ಪೀಠವನ್ನು ಏರಿ ಕಳೆದ 25 ವರ್ಷಗಳಲ್ಲಿ ಹಮ್ಮಿಕೊಂಡ ಹಲವಾರು ಕಾರ್ಯಕ್ರಮಗಳ ವಿವರಗಳನ್ನು ಅವರು ನೀಡಿದರು. ಸ್ವರ್ಣವಲ್ಲಿ ಸಂಸ್ಥಾನದ 54 ನೇಯ ಯತಿವರ್ಯರು ಅವರು. ಸ್ವರ್ಣವಲ್ಲಿ ಸಂಸ್ಥಾನವನ್ನು ಶ್ರೀಮದ್ ಶಂಕರಾಚಾರ್ಯರು ಕಾಶಿಯಲ್ಲಿ ಸ್ಥಾಪಿಸಿದರು. ಕಾಲಾಂತರದಲ್ಲಿ, ಸುಮಾರು 1300 ವರುಷಗಳ ಇತಿಹಾಸದಲ್ಲಿ, ಈ ಮಠ ಶಾಲ್ಮಲಾ ನದಿಯ ದಂಡೆಯ ಮೇಲೆ ಪ್ರತಿಷ್ಠಾಪನೆಗೊಂಡು ಕಳೆದ 150 ವರುಷಗಳಿಂದ ಈಗಿನ ಸ್ವರ್ಣವಲ್ಲಿ ಎಂಬ ಜಾಗೆಯಲ್ಲಿದೆ. ಮಠದ ವತಿಯಿಂದ ಕೃಷಿಯಲ್ಲದೆ, ಶಾಲಾ ಶಿಕ್ಷಣ, ಉಚಿತ ವಿದ್ಯಾರ್ಥಿ ನಿಲಯಗಳನ್ನು ಬೆಂಗಳೂರು ಹಾಗೂ ಇನ್ನಿತರ ಜಾಗೆಗಳಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಮಠದ ಕಟ್ಟಡವನ್ನು ವಿಸ್ತರಿಸುವ ಮತ್ತು ಹಲವು ಹೊಸ ಯೋಜನೆಗಳಿಗೆ ಕ್ಷಮತೆ ನೀಡುವ ಉದ್ದೇಶದಿಂದ ಇನ್ನೂ ಹಲವು ಹೊಸ ಕಟ್ಟಡಗಳನ್ನು ಪೀಠಾರೋಹಣದ 25ನೇ ವರ್ಷದ ಸಂದರ್ಭದಲ್ಲಿ ಹಮ್ಮಿಕೊಂಡದ್ದನ್ನು ಸಭೆಗೆ ತಿಳಿಸಲಾಯಿತು. ಮಠಕ್ಕೆ ನಡೆದು ಕೊಳ್ಳುವವರು ಮಲೆನಾಡಿನ 16 ಸೀಮೆಗಳಲ್ಲಿ ಇದ್ದಾರೆ. ಅವರಲ್ಲಿ ಮುಖ್ಯವಾಗಿ ಹವ್ಯಕರು, ರಾಮಕ್ಷತ್ರಿಯರು, ಗೌಳಿ ಹಾಗೂ ಇನ್ನಿತರ ಸಮುದಾಯಗಳು ಇವೆ. ಈ ಎಲ್ಲ ಸಮುದಾಯದ ಜನ ಸಂಪದ ಮಠದ ವಿವಿಧ ಕಾರ್ಯಕ್ರಮಗಳ ವ್ಯವಹಾರವನ್ನು ನೋಡಿಕೊಳ್ಳುತ್ತವೆ.

ಮಹಾಸ್ವಾಮಿಗಳ ಮಂತ್ರಾಕ್ಷತೆ ಹಾಗೂ ಆಶೀರ್ವಚನಗಳನ್ನು ಮಾಡಿದರು. ಗೋಕರ್ಣ ಮಂಡಲದ ಅಧ್ಯಕ್ಷ ಡಾ. ನಾರಾಯಣ ಭಟ್ಟರು ವಂದಿಸಿದರು. ಅ

***ಡಾ. ವೆಂಕಟಾಚಲ ಹೆಗಡೆ***

# ಡಾ. ರಾಜ್‌ಕುಮಾರ್

## ಜನ್ಮದಿನದಂದು ಒಂದು ನೆನಪು



ಏಪ್ರಿಲ್ 24, 1929 ರಂದು ಸಿಂಗನಲ್ಲೂರು ಪುಟ್ಟಸ್ವಾಮಯ್ಯ ಮತ್ತು ಲಕ್ಷ್ಮಮ್ಮ ದಂಪತಿಗಳಿಗೆ ಗಾಜನೂರಿನಲ್ಲಿ ಮುತ್ತತ್ತಿರಾಯನ ವರಪ್ರಸಾದದಿಂದ ಜನಿಸಿದ 'ಮುತ್ತುರಾಜು' ಲೋಕಕಂಡ ಮಹೋನ್ನತ ನಟ ಮಾತ್ರವಲ್ಲದೆ ಆದರ್ಶ ಪುರುಷ. ಸಿನಿಮಾ ರಂಗ ವೃತ್ತಿಯಾದರು ಸಿನಿಮಾವನ್ನು ಮೀರಿ ಬೆಳೆದ ಮಹಾನ್ ಮಾನವತ ವ್ಯಕ್ತಿ. ಮೂರನೆ ತರಗತಿವರೆಗೆ ಓದಿ ತಂದೆಯ ಆದರ್ಶ ಮತ್ತು ತಾಯಿಯಿಂದ ಸಂಸ್ಕಾರ ಪಡೆದು ಅದರೊಂದಿಗೆ ಹಗಲಿರುಳೆನ್ನದೆ ಕ್ಯಾಮಾರ ಮುಂದೆ ದುಡಿದು ತಮ್ಮ ಅಭಿನಯದಿಂದ ಕೋಟ್ಯಾನು ಕೋಟಿ ಅಭಿಮಾನಿಗಳ ಪ್ರೀತಿ ಗಳಿಸಿ ಅಂತಹ ಪ್ರೀತಿಯೊಂದಿಗೆ ಡಾಕ್ಟರೇಟ್, ದಾದಾ ಸಾಹೇಬ್ ಫಾಲ್ಕೆ, ಪದ್ಮಭೂಷಣ ಸೇರಿದಂತೆ ಅನೇಕ ಸನ್ಮಾನಗಳನ್ನು ಪಡೆದಿರುವ ವರನಟ ರಾಜಕುಮಾರ್ ನಮ್ಮೆಲ್ಲರ ಅಕ್ಕರೆಯ ಅಣ್ಣಾವ್ರರದ್ದು ಇದೆ ಏಪ್ರಿಲ್ 24 ರಂದು 88ರ ಜನ್ಮ ದಿನ.

ಅಮೇರಿಕದಿಂದ ಪ್ರತಿಷ್ಠಿತ "ಕೆಂಟಕಿ ಕರ್ನಲ್" ಪ್ರಶಸ್ತಿ ಪಡೆದ ಏಕೈಕ ಭಾರತೀಯ ನಟ ಎಂಬ ಹಿರಿಮೆಗೂ ಪಾತ್ರರಾಗಿದ್ದಾರೆ. ವೈಭೋಗದ ಜೀವನದ ಬಗ್ಗೆ ಎಂದಿಗೂ ಕನಸು ಕಾಣದ ರಾಜ್‌ರವರನ್ನು ಸಕಲ ವೈಭೋಗಗಳು ಹಿಂಬಾಲಿಸಿದವು. ಯಾವುದನ್ನೂ ಅಂಟಿಸಿಕೊಳ್ಳದ ರಾಜ್‌ರವರು ತಮ್ಮ 45ರ ವಯಸ್ಸಿನಲ್ಲಿ ನಾಯ್ಕರ್ ಅವರಿಂದ ಜೀವದ, ಜೀವನದ ಸತ್ವವನ್ನು ಅರಿಯಲು ಹಠಯೋಗವನ್ನು ಕಲಿತು ಅಭಿಮಾನಿಗಳಿಗೆ ಯೋಗಾಸನದ ರಾಯಬಾರಿಯಾಗಿ ಉತ್ತಮ ಗುಣಮಟ್ಟದ ಜೀವನ ಸಂದೇಶ ಸಾರಿದರು. ಈ ಸಂದರ್ಭದಲ್ಲಿ ಎಲ್ಲಾ ಕನ್ನಡ ಅಭಿಮಾನಿ ದೇವರುಗಳು ಅವರ ವಿಚಾರಧಾರೆ, ಸಾಮಾಜಿಕ ಕಳಕಳಿ ಮತ್ತು ಸರಳ ಜೀವನವನ್ನು ಮೈಗೂಡಿಸಿಕೊಂಡು ಆದರ್ಶಪ್ರಾಯವಾದ ಬದುಕು ನಡೆಸಬೇಕು.

ಪೌರಾಣಿಕ, ಐತಿಹಾಸಿಕ, ಜಾನಪದ, ಸಾಮಾಜಿಕ ಮತ್ತು ಸಮಕಾಲೀನ ಬದುಕಿನ ಚಿತ್ರಗಳ ಪಾತ್ರಗಳಲ್ಲದೇ ಯಾವುದೇ ಪಾತ್ರಗಳನ್ನು ಅತ್ಯಂತ ಸಮರ್ಪಕವಾಗಿ, ಲೀಲಾಜಾಲವಾಗಿ ನಟಿಸಿ ಸೈ ಎನಿಸಿಕೊಂಡಿರುವ ಏಕೈಕ ನಟ ಎಂದು ಸಾಧಿಸಿ ತೋರಿಸಿರುವರು. ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಕಲೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ರಾಜ್‌ಕುಮಾರ್ ಅವರು ತಮ್ಮ 50 ವರ್ಷದ ವೃತ್ತಿ ಜೀವನದಲ್ಲಿ ನಿರಂತರ ಕಲಾಸೇವೆಯನ್ನು ಮಾಡುತ್ತಾ, ಕನ್ನಡ ಚಿತ್ರರಂಗದೊಂದಿಗೆ ತಾವು ಬೆಳೆದರು. ಬೇಡರ ಕಣ್ಣಪ್ಪ, ಕನಕದಾಸ, ಬಂಗಾರದ ಮನುಷ್ಯನಿಂದ ಹಿಡಿದು ಜೇಮ್ಸ್‌ಬಾಂಡ್‌ವರೆಗೆ ಎಲ್ಲಾ ರೀತಿಯ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿರುವ ರಾಜ್ ಅವರ ಅಭಿನಯ ಚಾತುರ್ಯಕ್ಕೆ ಅವರೇ ಸಾಟಿ, ರಾಜ್ ಏಕಮೇವಾ ಅದ್ವಿತೀಯರೆನಿಸಿದ್ದರು.

1954ರಲ್ಲಿ ತೆರೆಕಂಡ ಬೇಡರ ಕಣ್ಣಪ್ಪ ಚಿತ್ರದ ಮೂಲಕ ಬೆಳ್ಳಿತೆರೆಗೆ ರಾಜಕುಮಾರ್ ಎಂಬ ಹೊಸ ನಾಯಕ ನಟನ ಜನನವಾಯಿತು. ದಿನಬೆಳಗಾಗುವುದರಲ್ಲಿ ಮುತ್ತುರಾಜ್, ರಾಜ್‌ಕುಮಾರ್‌ನಾಗಿ ಮೈಸೂರು ಪ್ರಾಂತ್ಯದಲ್ಲಲ್ಲದೆ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಜನಪ್ರಿಯರಾದರು. ಇದಕ್ಕು ಮುನ್ನ 1942ರಲ್ಲಿ ತೆರೆಕಂಡ 'ಪ್ರಹ್ಲಾದ' ಚಿತ್ರದಲ್ಲಿ ತಂದೆ ಮತ್ತು ತಮ್ಮನೊಂದಿಗೆ ಬಾಲನಟನಾಗಿ ಮತ್ತು 'ಶ್ರೀನಿವಾಸ ಕಲ್ಯಾಣ' ಚಿತ್ರದಲ್ಲಿ ಸಪ್ತಋಷಿಗಳಲ್ಲಿ ಒಬ್ಬ ಋಷಿಯಾಗಿ ಕಾಣಿಸಿಕೊಂಡಿದ್ದರು. ಮುಂದೆ ಅವರ ಸಾವಿನಲ್ಲೂ ತಮ್ಮ ಮೊದಲ ಚಿತ್ರದ ಕಣ್ಣಪ್ಪನಂತೆ ತಮ್ಮ ನೇತ್ರ ಧಾನ ಮಾಡಿ ಆದರ್ಶರಾದರು. ಭಕ್ತ ಅಂಬರೀಷ ಪಾತ್ರ ಮಾಡುವ ಮಹತ್ವಕಾಂಕ್ಷೆ ಹೊಂದಿದ್ದ ರಾಜ್ ಅವರ ಆಸೆ ನಿರ್ಮಾಣ ಹಂತದಲ್ಲಿ ನಿಂತು ಹೋಗಿದ್ದು ವಿಪರ್ಯಾಸ.

ಡಾ. ರಾಜ್‌ಕುಮಾರ್ ಅವರ ಜೀವನ ಚರಿತ್ರೆ ಮಹಾರಾಷ್ಟ್ರದ 8ನೇ ತರಗತಿಯ ಕನ್ನಡ ಪುಸ್ತಕದಲ್ಲಿ ನಟ ಸಾರ್ವಭೌಮ ಎಂಬ ತಲೆಬರಹದಡಿ ಪಠ್ಯವಿರುವುದು ಅವರ ಸಾಧನೆಗೆ ಹಿಡಿದ ಕನ್ನಡಿ. ನಿರ್ಮಾಪಕರನ್ನು ಅನ್ನದಾತ, ಅಭಿಮಾನಿಗಳನ್ನು ದೇವರುಗಳೆಂದು ಸಂಬೋಧಿಸುತ್ತಿದ್ದ ರಾಜ್ ಅವರು ಭಕ್ತಿಪ್ರಧಾನ ಪಾತ್ರ ಅಭಿನಯಿಸುತ್ತ ಭಕ್ತಿ ಮಾರ್ಗವನ್ನು ಅನುಸರಿಸಿ ಎಲ್ಲರಲ್ಲೂ ದೇವರನ್ನು ಕಂಡರು.

1992 ರಲ್ಲಿ "ಜೀವನ ಚೈತ್ರ" ಚಿತ್ರದ ತೋಡಿ ರಾಗದಲ್ಲಿ ಹಾಡಿದ "ನಾದಮಯ" ಹಾಡಿಗೆ ರಾಷ್ಟ್ರ ಪ್ರಶಸ್ತಿ ಸಂದಿದೆ. ನಟನೆ ಮತ್ತು ಗಾಯನ ಎರಡರಲ್ಲೂ ರಾಷ್ಟ್ರ ಪ್ರಶಸ್ತಿ ಪಡೆದ ಏಕೈಕ ನಾಯಕ ನಟ ಡಾ. ರಾಜ್‌ಕುಮಾರ್. ರಾಜ್ ಗಾಯನದ ನೂರಾರು ಭಕ್ತಿಗೀತೆಗಳ ಧ್ವನಿ ಸುರುಳಿಗಳು ಜನಮನ ಗೆದ್ದು ಜನಪ್ರಿಯವಾಗಿದೆ.

ನಾವು ಮಯೂರರನ್ನು, ಪುಲಕೇಶಿಯನ್ನು ಮತ್ತು ಕೃಷ್ಣದೇವರಾಯನನ್ನು ನೋಡಿಲ್ಲ, ಆದರೆ ರಾಜ್ ಅವರ ಮುಖಾಂತರ ಕಂಡಿದ್ದೀವಿ. ಹೀಗೆ ತಮ್ಮ ಜೀವನದುದ್ದಕ್ಕೂ ಡಾ. ರಾಜ್ ಸದಾ ಕನ್ನಡದ ರಾಯಭಾರಿಯಾಗಿ ಬದುಕಿದರು. ಅಣ್ಣಾವ್ರಿಗೆ ಅಣಾವ್ರೆ ಸಾಟಿ...ಹೀಗೆ ರಾಜ್ ಅವರು ಒಂದಲ್ಲ ಒಂದು ರೂಪದಲ್ಲಿ ಕನ್ನಡಿಗರ ಮನದಾಳದಲ್ಲಿ ಎಂದೆಂದಿಗೂ ಉಳಿದಿರುತ್ತಾರೆ.

ಡಾ. ರಾಜ್‌ಕುಮಾರ್ ರವರ ಜೀವನ ಕುರಿತ ಪುಸ್ತಕ 'ರಾಜ್‌ಕುಮಾರ್ ಸಮಗ್ರ ಚರಿತ್ರೆ'ಗೆ 2016ನೇ ಸಾಲಿನ ರಾಷ್ಟ್ರೀಯ ಸ್ವರ್ಣ ಕಮಲ ಪ್ರಶಸ್ತಿ ದೊರೆತಿರುವುದು ಅವರ ಸಾಧನೆಗೆ ದೊರೆತ ಮತ್ತೊಂದು ಗರಿ. ಈ ಪುಸ್ತಕವನ್ನು ದೊಡ್ಡ ಹುಲ್ಲೂರು ರುಕ್ಕೋಜಿ ಅವರು 15 ವರ್ಷದ ಪರಿಶ್ರಮ, ಸಂಶೋಧನೆ ಮತ್ತು ಸಾಕಷ್ಟು ಹಣ ವೆಚ್ಚ ಮಾಡಿ ಪ್ರಕಟಿಸಿದ್ದಾರೆ. ಎರಡು ಸಂಪುಟಗಳಲ್ಲಿ ಪ್ರಕಟವಾಗಿರುವ ಈ ಪುಸ್ತಕ ಕ್ರಮವಾಗಿ 1080 ಮತ್ತು 1060 ಪುಟಗಳನ್ನು ಒಳಗೊಂಡಿವೆ.

ಡಾ. ರಾಜ್‌ಕುಮಾರ್ ರಂಗಭೂಮಿಯಿಂದ ತಮ್ಮ ನಟನಾ ಜೀವನ ಪ್ರಾರಂಭಿಸಿ ಕನ್ನಡ ಚಿತ್ರರಂಗಕ್ಕೆ ಬಂದು ಮಾಡಿದ ಸಾಧನೆ, ಅವರ ಜೀವನ ಶೈಲಿ, ಬದುಕು ಹೀಗೆ ಹೇಳ್ತಾ ಹೋದ್ರೆ ಆಕಾಶವೆ ಮಿತಿ. ಅಂದ್ರೆ ರಾಜ್ ಕುಮಾರ್ ಒಂದು ಮಹಾಸಾಗರ. ಆ ಸಾಗರದ ಒಂದು ಹನಿಯ ಲಕ್ಷೋಪಲಕ್ಷ ಭಾಗದಲ್ಲಿಯ ಒಂದು ಸಣ್ಣ ಭಾಗದಷ್ಟು ಈ ಮೂಲಕ ಬರೆಯಲು ಪ್ರಯತ್ನಿಸಲಾಗಿದೆ. ಜೈ ಕರ್ನಾಟಕ. ಅ

*ಹರಿ ಪ್ರಿಯ. ಎಸ್*

## ಅಭಿನಂದನೆ



ಶ್ರೀ ಕೆ.ಎಸ್. ಸೋಮಶೇಖರ್ ಅವರು 'ಪ್ರೇಮ್‌ಚಂದ್ ಮತ್ತು ಕುವೆಂಪುರವರ ಕಥಾ ಸಾಹಿತ್ಯದಲ್ಲಿ ಯತಾರ್ಥಬೋಧ' ಎಂಬ ವಿಷಯದ ಕುರಿತು ಬರೆದು ಮಂಡಿಸಿದ ಮಹಾಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದೆ. ಮೂಲತಃ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ನೀಲ್ಟೂರಿನವರಾದ ಸೋಮಶೇಖರ್ ಅವರು ಪ್ರಸ್ತುತ ದೆಹಲಿಯ ರಾಜ್ಯಸಭೆಯಲ್ಲಿ ಜಂಟಿ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದಕ್ಕೆ ಮೊದಲು ಇವರು ಕೇಂದ್ರದ ಮಾಜಿ ಮಂತ್ರಿಗಳಾದ ಶ್ರೀ ಜಿ.ವೈ. ಕೃಷ್ಣನ್ (ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆಗಿದ್ದರು), ಶ್ರೀ ಸಿ.ಎಂ. ಇಬ್ರಾಹಿಂ ಮತ್ತು ಶ್ರೀ ಬಸನಗೌಡ ಪಾಟೀಲ ಅವರಿಗೆ ಆಪ್ತ ಕಾರ್ಯದರ್ಶಿಗಳಾಗಿ ಹಾಗೂ ಸಂಪರ್ಕ ಸಚಿವಾಲಯ, ಕರ್ನಾಟಕ ಸರ್ಕಾರ, ಬೆಂಗಳೂರಿನಲ್ಲಿ ಜಂಟಿ ನಿರ್ದೇಶಕರಾಗಿ ಕೂಡ ಸೇವೆ ಸಲ್ಲಿಸಿರುತ್ತಾರೆ. ಈಗ ಇವರು ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅ



# ಕಾಮನಬಿಲ್ಲಿನಡಿ ಅರಳಿದ ವಿಶ್ವ ಸಾಂಸ್ಕೃತಿ ಮೇಳ

ಫೆಬ್ರವರಿ 2016ರ ಮಧ್ಯದಲ್ಲಿ ನನ್ನ ಪರಿಚಿತರೊಬ್ಬರು, ಮಾರ್ಚ್ ತಿಂಗಳಲ್ಲಿ ಆಯೋಜಿಸಲಾಗುವ ವರ್ಲ್ಡ್ ಕಲ್ಚರಲ್ ಫೆಸ್ಟಿವಲ್‌ನಲ್ಲಿ ನನ್ನನ್ನು ಭಾಗಿಯಾಗಲು ಕೇಳಿದರು. ಇಂತಹ ದೊಡ್ಡ ಕಾರ್ಯಕ್ರಮದಲ್ಲಿ ಹೇಗೆ ಭಾಗಿಯಾಗುವುದು ಎನ್ನುವ ಆತಂಕ. ಆದರೂ ಒಪ್ಪಿದ್ದೆ. ಈ ಮಧ್ಯೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ದಿನನಿತ್ಯ ಪತ್ರಿಕೆಗಳ್ಲಿ ಬರುತ್ತಿರುವ ವಿಚಾರ / ಚರ್ಚೆ ನ್ಯಾಯಾಲಯದ ಅಂಗಳ ತಲುಪಿದ ಸುದ್ದಿ ಇನ್ನೊಂದೆಡೆ ಈ ಕಾರ್ಯಕ್ರಮ ಸಾರಗವಾಗಿ ನೆರವೇರುವುದೇ? ಎನ್ನುವ ಆತಂಕ. ಅಂತೂ ನಿರೀಕ್ಷಿಸಿದ ಆ ದಿನ 11.03.2016 ಬಂದೇ ಬಿಟ್ಟಿತು. ಹಾಗೂ ಎಲ್ಲ ಆತಂಕ ಸಂದೇಹಗಳಿಗೆ ತೆರೆಬಿದ್ದಂತಾಯು. ಮನಕ್ಕೆ ನೆಮ್ಮದಿ ತಂದಿತು.

ಜೀವನದಲ್ಲಿ ನಡೆಯುವ ಹಲವು ಆನಂದಕರ ಘಟನೆಗಳನ್ನು ಆಹ್ಲಾದಕರವಾಗಿತ್ತು ರೋಮಾಂಚನಕಾರಿಯಾಗಿತ್ತು. ಹೀಗೆ ಹಲವು ಪದಗಳಿಂದ ವಿವರಿಸುತ್ತೇವೆ. ವರ್ಲ್ಡ್ ಕಲ್ಚರಲ್ ಫೆಸ್ಟಿವಲ್‌ನ ನನ್ನ ಅನುಭವ ಈ ಎಲ್ಲಾ ಪದಗಳಿಂದ ಮೇಲೆ ಮೀರಿದ್ದು, ಪೋಣಿಸಲು ಪದಗಳೇ ಸಿಗುತ್ತಿಲ್ಲ. ಬೃಹತ್ ಆದ ರಂಗಮಂಚದಲ್ಲಿ 1800 ಕಲಾವಿದರು ಒಂದೇ ಸಂಗೀತ, ಎಲ್ಲರದೂ ಒಂದೇ ತಾಳ, ಬಡವ-ಶ್ರೀಮಂತ, ಗಂಡು-ಹೆಣ್ಣು, ಹಿರಿಯ-ಕಿರಿಯನೆಂಬ ಬೇಧವಿರಲಿಲ್ಲ. ಯಾರು ಯಾವ ಜಾತಿ-ಮತಕ್ಕೆ ಸೇರಿದವರೆಂಬ ಅರಿವು ಯಾರಿಗೂ ಬೇಕಾಗಿರಲಿಲ್ಲ. ಕೃಷ್ಣನ ಕೊಳಲು ನಾದಕ್ಕೆ ಗೋಪಿಯರು ನೃತ್ಯದಲ್ಲಿ ಮೈಮರೆತು ಕುಣಿಯುತ್ತಿರುವಂತೆ ಭಾಸವಾಗುತ್ತಿತ್ತು. ಭಾರತದ ಸಂಸ್ಕೃತಿ ಶ್ರೀಮಂತವಾದುದು ಎನ್ನುವುದಕ್ಕೆ ಈ ಕಾರ್ಯಕ್ರಮ ಕೈಗನ್ನಡಿಯಾಗಿತ್ತು.

ವರ್ಲ್ಡ್ ಕಲ್ಚರಲ್ ಫೆಸ್ಟಿವಲ್‌ನ ಕಾರ್ಯಕ್ರಮವನ್ನು ದಿ ಆರ್ಟ್ ಆಫ್ ಲೀವಿಂಗ್‌ನವರ 35ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ದೆಹಲಿಯಲ್ಲಿ ಇದೇ ಫೆಬ್ರವರಿ 11,12 ಮತ್ತು 13ರಂದು ಆಯೋಜಿಸಲಾಗಿತ್ತು. ಏಳು ಎಕರೆ ಬೃಹತ್ ಆದ ಆವರಣದಲ್ಲಿ ಆನೇಕ ತರಹದ ಕಾರ್ಯಕ್ರಮಗಳು ಸುಂದರವಾಗಿ ಮೂಡಿಬಂದವು. ಈ ಕಾರ್ಯಕ್ರಮದಲ್ಲಿ 155 ದೇಶಗಳು, 3.5 ಮಿಲಿಯನ್ ಜನರು ಪಾಲ್ಗೊಂಡಿದ್ದರು. ಈಶ್ವರನೊಬ್ಬನೇ, ಮಾನವ ಜಾತಿ ಒಂದೇ ಎನ್ನುವುದು ವರ್ಲ್ಡ್ ಕಲ್ಚರಲ್ ಫೆಸ್ಟಿವಲ್‌ನ ಮೂಲ ಮಂತ್ರವಾಗಿತ್ತು.

ಹಿಂದಿನ ದಿನದ ತಾಲೀಮಿನಲ್ಲಿ ಪಾಶ್ಚಾತ್ಯದೇಶದವರು ಪಾಲ್ಗೊಂಡಿದ್ದರು. ಅವರ ತಾಲೀಮಿನ ನಂತರ ನಾವೆಲ್ಲರೂ ಆದರದಿಂದ ಅವರನ್ನು ಸ್ವಾಗತಿಸಿದೆವು. ಅದರಲ್ಲಿ ಹೆಚ್ಚಿನವರು 'ಇಂಡಿಯಾ ಈಸ್ ಗ್ರೇಟ್' ಎನ್ನುವ ಜೈಕಾರದೊಂದಿಗೆ ಮುಂದೆ ಸಾಗುತ್ತಿದ್ದರು. ಅವರ ಜೈಕಾರ, ನೀಡಿದ ಆನಂದ ಆವಿಸ್ಮರಣೀಯ.

ವರುಣನ ಆಗಮನ, ಕಾಮನಬಿಲ್ಲಿನ ಸುಂದರವಾದ ನೋಟ, ರಂಗಮಂಚವನ್ನು ಆಲಂಕರಿಸಲು ಬಂದ ಹಾಗೆ ಗೋಚರಿಸುತ್ತಿತ್ತು. ಕೆಲವು ತೊಂದರೆಗಳಾದರೂ ಕಾರ್ಯಕ್ರಮದ ಶ್ರೀಗಣೇಶವಾದ ಮೇಲೆ ಎಲ್ಲವೂ ಕಣ್ಮರೆಯಾಗಿ ಹೋಯಿತು.


ಮಳೆಯಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದವರ ಹುಮ್ಮಸ್ಸಿಗೆ ಯಾವ ಕೊರತೆಯೂ ಆಗಲಿಲ್ಲ. ಗುಂಪು ಮಾಡಿಕೊಂಡು ನೃತ್ಯ ಮಾಡಿ ಮಳೆಯನ್ನು ಆನಂದಿಸಿದೆವು. ಸ್ವಾತಿ ಮುತ್ತಿನ ಮಳೆಹನಿಗಳು ಪುಷ್ಪವೃಷ್ಟಿಯಂತೆ ಅನಿಸುತ್ತಿತ್ತು. ನಮ್ಮ ದೇಶದ ಪ್ರಧಾನ ಮಂತ್ರಿಯವರ ಉಪಸ್ಥಿತಿ ಕಾರ್ಯಕ್ರಮಕ್ಕೆ ಕಳೆ ತಂದ ಹಾಗಿತ್ತು. ಇತಿಹಾಸ ಸೃಷ್ಟಿಸಿದ ಈ ಮಹಾ ಆಯೋಜನೆಯಲ್ಲಿ ನನಗೆ ಭಾಗಿಯಾಗಲು ಅವಕಾಶ ಸಿಕ್ಕಿದುದಕ್ಕೆ ಹೆಮ್ಮೆ ಅನಿಸುತ್ತದೆ. ಅ

*ಸವಿತಾ ನೆಲ್ಲಿ*

## ಅಭಿನಂದನೆ

ಶ್ರೀ ಸುಧೀರ್ ವಿ. ಫಡ್ನೀಸ್‌ರವರು ರಚಿಸಿದ ಈ ಚಿತ್ರಕಲಾ ಕೃತಿಗೆ 'ಪ್ರಫುಲ್ಲ ಧಹನುಕರ್ ಕಲಾನಂದ ಆರ್ಟ್ ಪ್ರತಿಷ್ಠಾನ'ವು ನಡೆಸಿದ 2016ನೇ ಸಾಲಿನ ವಾರ್ಷಿಕ ಸ್ಪರ್ಧೆಯಲ್ಲಿ 'ಉತ್ತರ ವಲಯದ ದೆಹಲಿ ನಗರ ಪ್ರಶಸ್ತಿ' ನೀಡಿ ಗೌರವಿಸಿದೆ. ಈ ಪ್ರಶಸ್ತಿಯು ಹತ್ತು ಸಾವಿರ ರೂಪಾಯಿಗಳ ನಗದು ಬಹುಮಾನ ಹಾಗೂ ಸನ್ಮಾನಪತ್ರವನ್ನು ಒಳಗೊಂಡಿದೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಅ








Mount Kilimanjaro in Tanzania, the only independent Mountain of Africa is of a height of approximately 20 thousand feet. Also known as the 'Roof of Africa', more than half attempting to reach its summit give up. On 28th February a 49 year old Kannadiga Shri Prakash Savadi of Hubli, Karnataka with his 17 year old son Mihir climbed, created a record. They had trudged for seven long days without the support of oxygen to reach the top. This adventurous duo has already trekked hard Himalayan mountain ranges.

Prakash, his wife Gauri, son Mihiri and young daughter Saniya have trekked the Ladakh region. This adventurous family has thus brought laurels to our land Karnataka and in turn to our nation Hindustan.

Mihir is a Champion Swimmer and recipient of National Youth Achievement Award from the President of Singapore for his contribution in the fields of education, sports and social service et al.

***B S Kallur***



**SAUJANYA** PRINTING PRESS

A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com

PHONE: 011-40520770 MOBILE:9811104398,,9811604398

Delhi Karnataka Sangha Abhimatha Monthly,
April-2016, Vol. No.26, Issue No.7, Price Rs.1/- RNI Regn. No. 53405/91, DL-SW-1/4016/16-18
Printout Date : April 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.



ಗಣ್ಯರೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಸ್ಥಳೀಯ ಕಲಾವಿದೆಯರು